# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE     Vol XV - 12     ಡಿಸೆಂಬರ್ 1997

ಈ ಸಂಚಿಕೆಯಲ್ಲಿ


| | | |
|---|---|---|
| ಸುತ್ತ-ಮುತ್ತ | | 2 |
| ಕಾರಂತರು ಮರಳಿ ಮಣ್ಣಿಗೆ | | 3 |
| Remembering Usha Jairam - A Special Feature | | 4 |
| Usha and Relifework | • *Tara Shah* | 5 |
| Usha and The Mandal | • *Purnima Srikrishna* | 6 |
| ನಾ ಕಂಡ ಉಷಾ | • ಸುಮಿತ್ರಾ ಚಂಪಕ್‌ನಾಥ್ | 7 |
| Usha and A I W C | • V. Lakshmi Sharma | 9 |
| ನಾಟಕ ರಂಗದಲ್ಲಿ ಉಷಾ | • ಡಾ. ಮಂಜುನಾಥ್ | 10 |
| Usha - An Organiser Beyond Compare | • Vimala Narayana Rao | 12 |
| Shraddha | • Bhavani | 13 |
| ಉಷಾರವರ ಕೆಲವು ರಚನೆಗಳು | | 14 |
| Tribute in Verses | | 15 |
| ಉಷಾಮನೆ | • ಉಮಾ ರಾವ್ | |
| ಉಷಾಗೆ ಬಾಷ್ಪಾಂಜಲಿ | • ಡಾ। ಸುನೀತಿ ಉದ್ಯಾವರ್ | |
| ನನ್ನ ಸಹಗಾರ್ತಿ ಉಷಾ | • ಮೀರಾ ಕುಲಕರ್ಣಿ | |


The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ಸುತ್ತಮುತ್ತ

## ಮಹಾರಾಷ್ಟ್ರ ರಾಜ್ಯ ಕನ್ನಡ ಸಾಹಿತ್ಯ ಸಮ್ಮೇಳನ

ಮುಂಬಯಿ: ಕರ್ನಾಟಕ ಸಂಘ ಮಾಟುಂಗಾದ ನೇತೃತ್ವದಲ್ಲಿ ಮುಂಬಯಿಯ ಇತರ ಎಲ್ಲ ಕನ್ನಡ ಸಂಸ್ಥೆಗಳ ಸಹಯೋಗದೊಂದಿಗೆ ಕಳೆದ ದಶಂಬರ 6 ಹಾಗೂ 7ರಂದು ಕರ್ನಾಟಕ ಸಂಘದ ಸಭಾಗೃಹದಲ್ಲಿ ಮಹಾರಾಷ್ಟ್ರ ರಾಜ್ಯ ಕನ್ನಡ ಸಾಹಿತ್ಯ ಸಮ್ಮೇಳನವು ನಡೆಯಿತು.

### ಉದ್ಘಾಟನಾ ಸಮಾರಂಭ

ದಿನಾಂಕ 6-12-1997 ಸಂಜೆ 5-30ಕ್ಕೆ ನಡೆದ ಉದ್ಘಾಟನಾ ಸಮಾರಂಭದಲ್ಲಿ ಸಮ್ಮೇಳನದ ಅಧ್ಯಕ್ಷರಾದ ಕನ್ನಡದ ಹಿರಿಯ ಸಾಹಿತಿ ಶ್ರೀ ಯಶವಂತ ಚಿತ್ತಾಲ ಅವರು ಮಾತನಾಡುತ್ತಾ "ಸಾಹಿತ್ಯವು ಮನುಷ್ಯನ ಅಂತಃಕರಣದಲ್ಲಿ ಪ್ರೀತಿ ಸೆಲೆಯೊಡೆಯುವ ಹಾಗೆ ಮಾಡಬೇಕು, ಇದೇ ಸಾಹಿತ್ಯ ಸಮಾಜಕ್ಕೆ ಕೊಡುವ ಬಹುದೊಡ್ಡ ಕೊಡುಗೆ" ಎಂದು ಅಭಿಪ್ರಾಯಪಟ್ಟರು

ಸಮ್ಮೇಳನವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ಅವರು ಮಾತಾಡುತ್ತ ಕನ್ನಡ ನಾಡು ನುಡಿಗಳಿಗಾಗಿ ಕೆಲಸವನ್ನು ಮಾಡುತ್ತಿರುವ ಹೊರನಾಡ ಅಥವಾ ಗಡಿನಾಡ ಕನ್ನಡಿಗರಿಗೂ ನಮ್ಮ ಸರಕಾರವು ತನ್ನ ಕೈಲಾದ ಧನ ಸಹಾಯವನ್ನು ನೀಡಲು ಬದ್ಧವಾಗಿದೆ ಎಂದರು.

ಅಂದಿನ ಮುಖ್ಯ ಅತಿಥಿಯಾಗಿ, ಕರ್ನಾಟಕ ಸರಕಾರದ ಸಣ್ಣಕೈಗಾರಿಕಾ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವ ಶ್ರೀ ಬಿ. ಎ. ಮೊಹಿದ್ದೀನ್ ಅವರು ಬಂದಿದ್ದರು ಮತ್ತು ಸಮ್ಮೇಳನಕ್ಕೆ ಆಗಮಿಸಬೇಕಾಗಿದ್ದ ಶ್ರೀ ಜೆ. ಹೆಚ್. ಪಟೇಲ್ ಅವರ ಅನುಪಸ್ಥಿತಿಯಲ್ಲಿ ಶ್ರೀ ಮೊಹಿದೀನ್ ಹಾಗೂ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಮುಂಬಯಿ ಕನ್ನಡ ಸಂಘ ಸಂಸ್ಥೆಗಳ ಪರವಾಗಿ ಸನ್ಮಾನವನ್ನು ಸ್ವೀಕರಿಸಿದರು.

ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಅಂದು ಮಧ್ಯಾಹ್ನ 2-00ಕ್ಕೆ ಯಕ್ಷಗಾನ ಗೋಷ್ಠಿ ಜರಗಿತು.

ಮರುದಿನ 7-12-1997ರವಿವಾರದಂದು ಬೆಳಿಗ್ಗೆ ಮಹಿಳಾ ಗೋಷ್ಠಿಯು ಜರಗಿತು. ಇದರಲ್ಲಿ ದುಡಿಯುವ ಮಹಿಳೆ ಮತ್ತು ಬದಲಾಗುತ್ತಿರುವ ಕೌಟುಂಬಿಕ ಮೌಲ್ಯಗಳು, ಶಿಕ್ಷಣ ಕ್ಷೇತ್ರ ಮತ್ತು ಮಹಿಳೆ, ಸಂಘಟನೆ ಮತ್ತು ಮಹಿಳೆ ಎಂಬ ವಿಷಯಗಳ ಕುರಿತು ಡಾ. ಗಿರಿಜಾ ಶಾಸ್ತ್ರಿ, ಡಾ. ವಾಣಿ ಉಚ್ಚಿಲ್ಕರ್ ಹಾಗೂ ಡಾ. ಸುನೀತಿ ಉದ್ಯಾವರ್ ಅವರು ಪ್ರಬಂಧಗಳನ್ನು ಮಂಡಿಸಿದರು.

ಅದೇ ದಿನ ಮಧ್ಯಾಹ್ನ "ಮುಂಬಯಿ ಕನ್ನಡಿಗ ನಿನ್ನೆ ಇಂದು ನಾಳೆ" ಎಂಬ ವಿಶೇಷ ಗೋಷ್ಠಿ ನಡೆಯಿತು. ಇದರಲ್ಲಿ ಸಾಹಿತ್ಯ, ನಾಟಕ, ಪತ್ರಿಕೆ, ಕಾರ್ಮಿಕರಂಗ ವಿಷಯಗಳ ಕುರಿತು ಡಾ. ವಿಶ್ವನಾಥ ಕಾರ್ನಾಡ್. ಕೆ. ಮಂಜುನಾಥಯ್ಯ, ಕೆ. ಟಿ. ವೇಣುಗೋಪಾಲ್, ಪದ್ಮನಾಭ ಶೆಟ್ಟಿ ಮುಂತಾದವರು ಪ್ರಬಂಧಗಳನ್ನು ಮಂಡಿಸಿದರು.

ಅಂದು ಸಂಜೆ 5-30ರಿಂದ ನಡೆದ ಕವಿಗೋಷ್ಠಿಯಲ್ಲಿ ಬಿ. ಎಸ್. ಕುರ್ಕಾಲ್, ಡಾ. ಸಂಜೀವ ಶೆಟ್ಟಿ, ಕುಮಾರ ಜೋಶಿ, ವಿ. ಎಸ್. ಶ್ಯಾನುಭಾಗ್, ಡಾ. ರಘುವೀರ ಭಟ್, ಸಾದಯ, ಬಿಂ. ಎಂ. ಬಶೀರ್, ಗೋಪಾಲ ತ್ರಾಸಿ, ಶ್ರೀನಿವಾಸ ಜೋಕಟ್ಟೆ, ಕೃ. ಶಿ. ಹೆಗಡೆ, ತುಳಸಿ ವೇಣುಗೋಪಾಲ್. ಜಿ. ಪಿ. ಕುಸುಮ ಮುಂತಾದವರು ತಮ್ಮ ಕವನಗಳನ್ನು ಓದಿದರು.

ಶ್ರೀ ವ್ಯಾಸರಾಯ ಬಲ್ಲಾಳ ಅವರು ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

ಸಮಾರೋಪ ಭಾಷಣವನ್ನು ಮಾಡುತ್ತಾ ಶ್ರೀ ಚಿತ್ತಾಲರು ಈಗ ಮುಂಬಯಿಯಲ್ಲಿ ಸ್ವಂತಂತ್ರ ದೃಷ್ಟಿಕೋನವುಳ್ಳ ವಿಮರ್ಶಕನ ಅಗತ್ಯವಿದೆ ಎಂದರಲ್ಲದೆ ಎರಡು ದಿನಗಳ ಈ ಸಾಹಿತ್ಯ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿತ್ತು ಎಂದು ಅಭಿಪ್ರಾಯಪಟ್ಟರು.

ಎರಡೂ ದಿನಗಳಲ್ಲಿಯೂ ಸಂಘದ ಕಿರು ಸಭಾಗೃಹದಲ್ಲಿ ಹಮ್ಮಿಕೊಳ್ಳಲಾಗಿದ್ದ ಮುಂಬಯಿಯ ಕನ್ನಡ ಲೇಖಕರ ಪುಸ್ತಕ ಪ್ರದರ್ಶನವು ಸಮ್ಮೇಳನದ ಇನ್ನೊಂದು ಮುಖ್ಯ ಆಕರ್ಷಣೆಯಾಗಿತ್ತು.

### ಸರದಾರ ನಗರ ಮಹಾನಗರ ಪಾಲಿಕಾ ಕನ್ನಡ ಶಾಲೆಯಲ್ಲಿ ಸಮವಸ್ತ್ರ ವಿತರಣಾ ಸಮಾರಂಭ

ಸರದಾರನಗರ ಮಹಾನಗರ ಪಾಲಿಕೆಯ ಕನ್ನಡ ಶಾಲೆಯಲ್ಲಿ ಲಾಯನ್ಸ್ ಕ್ಲಬ್ ಮುಲುಂಡ್, ಲೇಬ್‌ಸೈಡ್ ಇವರ ಪತಿಯಿಂದ ಬಡಮಕ್ಕಳಿಗೆ ಸಮವಸ್ತ್ರವನ್ನು ವಿತರಿಸುವ ಕಾರ್ಯಕ್ರಮವನ್ನು, ಎಫ್.ಎನ್.ವಿಭಾಗದ ಪ್ರಶಾಸಕೀಯ ಅಧಿಕಾರಿಯವರಾದ ಶ್ರೀಮತಿ ಸಂಗೀತಾ ಕದಮ್ ಇವರ ಘನ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು.

ಶಾಲಾ ಮಕ್ಕಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು.

ಸುಮಾರು ಐವತ್ತು ಬಡವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ವಿತರಿಸಲಾಯಿತು. ತದನಂತರ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ನಳಿನಿ ವ್ಹಿ. ಕೋಟ್ಯಾನ್‌ರವರು ಅಧ್ಯಕ್ಷರಾದ ಶ್ರೀಯುತ ಮೋಹನ ಸಾವಿತ್ರಿ ಇವರ ಹಸ್ತದಿಂದ ಐವತ್ತು ಸಮವಸ್ತ್ರಗಳ ಮೊತ್ತ ಏಳೂವರೆ ಸಾವಿರ ರೂಪಾಯಿಗಳನ್ನು ಸ್ವೀಕರಿಸಿದರು.

ಅತಿಥಿಗಳ ಭಾಷಣದಲ್ಲಿ ಡಾ|| ಕೆ. ಮೋಹನ್ ಮಾತನಾಡುತ್ತ, ವಿದ್ಯಾರ್ಥಿಗಳು ತಮ್ಮ ಕಾಲಮೇಲೆ ನಿಲ್ಲಬೇಕು. ಇದರಲ್ಲಿ ತಾಯಿಯ ಪಾತ್ರ ಹೆಚ್ಚಿನದು. ಶಿಕ್ಷಕರು ಇದಕ್ಕಾಗಿ ಹೆಚ್ಚಿನ ಪರಿಶ್ರಮ ಪಡಬೇಕೆಂದು ಉಪದೇಶಿಸಿದರು.

ಸೋಮೈಯ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರು ಖ್ಯಾತ ಕವಿಗಳಾದ ಡಾ. ಸಂಜೀವ ಶೆಟ್ಟಿಯವರು ಮಾತನಾಡುತ್ತ ಮಕ್ಕಳಲ್ಲಿ ಮಾತೆಯ ಪ್ರೀತಿ, ಪ್ರೇಮ, ವಿಶ್ವಾಸ, ಬಂಧು ಭಾವನೆಗಳನ್ನು ಬೆಳೆಸಬೇಕು. ವಿದ್ಯಾರ್ಥಿಗಳು ವಿದ್ಯೆಯನ್ನು ಕಲಿತು ಮುಂದಿನ ಜೀವನದಲ್ಲಿ ಉತ್ತಮ ನಾಗರಿಕರಾಗಲು ಬಾಲಕರು, ಶಿಕ್ಷಕರು ಒಂದಾದರೆ ಮಾತ್ರ ಸಾಧ್ಯ ಎಂದು ಕರೆ ನೀಡಿದರು.

ಶ್ರೀಮತಿ ಸಂಗೀತಾ ಕದಮ್ ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶಾಲಾ ಮುಖ್ಯೋಪಾಧ್ಯಾಯಿನಿಯವರ ಕಾರ್ಯಕ್ಷಮತೆಯನ್ನು ಹೊಗಳುತ್ತಾ ಪ್ರಸ್ತುತ ವರ್ಷದಲ್ಲಿ ಬೇರೆ ಬೇರೆ ಸಂಘ ಸಂಸ್ಥೆಗಳು ನೀಡಿದ ದಾನದಿಂದ ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಸಮವಸ್ತ್ರವನ್ನು ವಿತರಿಸಿರುತ್ತಾರೆ ಹಾಗೂ ಅಂದಿನ ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದ ಲಾಯನ್ಸ್ ಕ್ಲಬ್ಬಿನ ಗಣ್ಯ ವ್ಯಕ್ತಿಗಳ ಕಾರ್ಯಕಲಾಪಗಳನ್ನ ಹೊಗಳಿದರು.

---

## *ಓದುಗರ ಓಲೆ*

ಪ್ರಿಯ ಶ್ರೀಮಾನರೆ

ಸೆಪ್ಟೆಂಬರ್-ಅಕ್ಟೋಬರ್ '೯೭ರ ನೇಸರು ತಲುಪಿತು. ಶ್ರೀಮತಿ ಉಷಾ ಜಯರಾಮರ ನಿಧನ ಓದಿ ವ್ಯಸನವಾಯಿತು. ಅಸೋಸಿಯೇಶನಿಗೆ ಕಳೆ ತಂದಿದ್ದ ಅವರನ್ನು ಮರೆಯಲು ಸಾಧ್ಯವಿಲ್ಲ.

ನಿಮ್ಮವ,

— ಆನಂದ್, ಮೈಸೂರು

# ಕಾರಂತರು ಮರಳಿ ಮಣ್ಣಿಗೆ

ಕೋಟ ಶಿವರಾಮ ಕಾರಂತರೆಂದರೆ ಒಂದು ಅದಮ್ಯ ಚೇತನದ ಭೌತಿಕ ಸ್ವರೂಪವೆನ್ನಬಹುದು. ಅಂತಹ ಚೇತನವಿಂದು ಶರೀರವನ್ನು ಕಳೆದುಕೊಂಡು ನಿಶ್ಚಲವಾಗಿದೆ. ಬೌದ್ಧಿಕ, ವೈಚಾರಿಕ ಭಾವನಾತ್ಮಕ ಜಗತ್ತಿನಲ್ಲಿ ಕಾರಂತರ ಹೆಜ್ಜೆ ಗುರುತು ಅಚ್ಚಳಿದಂತೆ ಮೂಡಿನಿಂತಿದೆ. ಕಾದಂಬರಿ ಪ್ರಪಂಚದ ಲಕ್ಷಾಂತರ ಓದುಗರ ಹೃದಯದಲ್ಲಿ ಸ್ಥಿರವಾದ ಸ್ಥಾನವನ್ನು ಹೊಂದಿದ್ದರೂ ಕಾರಂತರು ಕೇವಲ ಕಾದಂಬರಿಕಾರರಾಗಿರಲಿಲ್ಲವೆಂತಲೂ, ಬರವಣಿಗೆಯ ಮಾಧ್ಯಮವಲ್ಲದೆ ಕಾರಂತರು ಅತರ ಅನೇಕ ಕ್ಷೇತ್ರಗಳಲ್ಲಿ ತಮ್ಮ ಹಿರಿಮೆಯನ್ನು ಸಾಧಿಸಿದ್ದಾರೆಂಬುದನ್ನು ಎಲ್ಲರೂ ಬಲ್ಲರು. ಕಾದಂಬರಿ, ನಾಟಕ, ಪತ್ರಿಕೋದ್ಯಮ, ವಿಜ್ಞಾನ, ಬಾಲ ಪ್ರಪಂಚ, ಶಬ್ದಕೋಶ, ಭರತ ನಾಟ್ಯ, ಜಾನಪದ, ಸಂಗೀತ, ಯಕ್ಷಗಾನ, ಛಾಯಾಂಕನ ಕಲೆ, ಚಲನಚಿತ್ರ ರಂಗ - ಇವರು ತಿಳಿಯದ, ಸಾಧಿಸದ ವಿಷಯವೇ ಇರಲಿಲ್ಲವೇನೋ.

`ತಿರುಗಿ ನೋಡು, ನೋಡಿ ತಿಳಿ' ಎಂಬುವುದು ಕಾರಂತರ ಬದುಕಿನ ಮೂಲಮಂತ್ರ. ಅದಕ್ಕಾಗಿ ಪ್ರಪಂಚ ಪರ್ಯಟನ ಅದರಿಂದ ಹುಟ್ಟಿದ್ದು `ಅಪೂರ್ವ ಪಶ್ಚಿಮ', `ಪೂರ್ವದಿಂದ ಅತ್ಯಪೂರ್ವಕ್ಕೆ', ಯಕ್ಷರಂಗಕ್ಕಾಗಿ ಪ್ರವಾಸ', `ಅಬೂವಿನಿಂದ ಬರಾಮಕ್ಕೆ'ಮುಂತಾದ ಪ್ರವಾಸ ಕಥನಗಳು.

ಏನನ್ನೂ ತಮ್ಮ ಅನುಭವದಿಂದ ತಿಳಿಯದೆ ಅವರು ಇತರರಿಗೆ ತಿಳಿಸಿದ್ದೇ ಇಲ್ಲ. ೯೦ರ ಇಳಿಹರಯದಲ್ಲೂ ಯೌವನದ ಹುಮ್ಮಸ್ಸಿನಿಂದ ಕುಣಿದು ತೋರಿಸುತ್ತಿದ್ದ ಕಾರಂತರು ತಮ್ಮ ಜೀವನಿಡೀ ಒಂದು ಬಗೆಯಲ್ಲಿ ಕ್ರಾಂತಿಯ ಕಹಳೆಯನ್ನು ಊದುತ್ತಲೇ ಇದ್ದವರು. ಅಂತರ್ಜಾತಿ ವಿವಾಹವಾಗಿ ಸಮಾಜದ ವಿರೋಧ ಕಟ್ಟಿಕೊಂಡವರು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಕಾರಾಗೃಹ ಸೇರಿದರು, ವೇಶ್ಯೆಯರ ಕುಟುಂಬದ ಹೆಣ್ಣು ಮಕ್ಕಳಿಗೆ ವಿವಾಹ ಏರ್ಪಡಿಸುವಲ್ಲಿ ನೆರವಾದರು, ಪತ್ರಿಕೆ ಆರಂಭಿಸಿ ಅನಿಷ್ಟಗಳನ್ನು ನಿಷ್ಠುರವಾಗಿ ಖಂಡಿಸಿದರು. ತುರ್ತು ಪರಿಸ್ಥಿತಿಯಲ್ಲಿ ಸರ್ಕಾರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿತೆಂದು ವಿರೋಧಿಸಿ ರಾಷ್ಟ್ರ ಪ್ರಶಸ್ತಿಯನ್ನು ಹಿಂತಿರುಗಿಸಿದರು. ಯಕ್ಷಗಾನ, ಸಂಗಿತ,ನೃತ್ಯ ಎಲ್ಲವೂ ಸರಳವಾಗಿದ್ದಷ್ಟೂ ಭಾವ ಪ್ರಕಟನೆಯಿಂದಲೇ ಶ್ರೇಷ್ಠವಾಗಬಲ್ಲವೆಂದು ಸಾಧಿಸಿ ತೋರಿಸಿದರು.

ತಮ್ಮ ಬದುಕನ್ನೇ ಒಂದು ಪ್ರಯೋಗಶಾಲೆಯಾಗಿ ಮಾಡಿದವರು ಅವರು. ಬಾಳನ್ನು ಸಂಪದ್ಭರಿತವಾಗಿ ಮಾಡಲು ಅವರು ಬಳಸಿಕೊಳ್ಳದ ಮಾಧ್ಯಮವೇ ಇರಲಿಲ್ಲ. ಯಾರಿಗೂ, ಯಾವುದಕ್ಕೂ ಹೆದರದ, ತನಗೆ ಸರಿತೋರಿದನ್ನು ಅನಿಸಿದಂತೆ ಹೇಳಬಲ್ಲ ಧೀರ, ಅನ್ಯಾಯಕ್ಕೆ ಭಾಗದ, ಮರುಕಕ್ಕೆ, ಪ್ರೇಮಕ್ಕೆ ಚಿರ ತೆರೆದ ಧೀಮಂತ ವ್ಯಕ್ತಿತ್ವದ ಕಾರಂತರಿಗೆ ಮಕ್ಕಳೆಂದರೆ ಅಪಾರ ಪ್ರೇಮ. ಅವರಿಗೆ ಕಾರಂತರು ಬಹಳ ಕೆಲಸ ಮಾಡಿದ್ದಾರೆ. ಬಾಲವನ, ಮಕ್ಕಳ ಕೂಟ, ಪದ್ಯಗಳ ರಚನೆ, ಶಿಕ್ಷಣ ಪ್ರಯೋಗ, ಶಬ್ದಕೋಶ ಸೃಷ್ಟಿ, ಬಾಲ ಪ್ರಪಂಚ, ವಿಶ್ವಕೋಶ ರಚನೆ, `ವಿಜ್ಞಾನ ಪ್ರಪಂಚ' ನಾಲ್ಕು ಸಂಪುಟಗಳ ರಚನೆ ಎಲ್ಲವೂ ಏಕ ವ್ಯಕ್ತಿ ಸಾಹಸ. ಅಷ್ಟಾಗಿ `ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ತನ್ನ ಕೃತಿಗಳ ಬಗ್ಗೆ ನಿರ್ಲಕ್ಷ್ಯ, ಅನೇಕಾನೇಕ ಪ್ರಶಸ್ತಿಗಳನ್ನು ಪಡೆದಿದ್ದರೂ, ಅತ್ಯಂತ ಹೆಚ್ಚಿನ ಜನಮನ್ನಣೆ ಯನ್ನೂ, ಜನಾನುರಾಗವನ್ನು ಗಳಿಸಿದ್ದರೂ ಸಹ ನಿರಾಡಂಬರವಾಗಿದ್ದ ಅತ್ಯಂತ ಸರಳ ಮೂರ್ತಿ.



ಮೈಸೂರು ಅಸೋಸಿಯೇಷನ್ನಿನ ದತ್ತಿ ಉಪನ್ಯಾಸ ಮಾಲೆಯಲ್ಲಿ ಕಾರಂತರು ಮಾತನಾಡುತ್ತಿರುವುದು.

ಈಚೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಖಾನೆಗಳ ಹೆಚ್ಚಳದಿಂದ ಪ್ರಕೃತಿ ನಾಶವಾಗುವುದನ್ನು ತಪ್ಪಿಸಲು ಕಾರಂತರು ಪ್ರತಿಭಟನೆಯ ಸೊಲ್ಲೆತ್ತಿದ್ದಲ್ಲದೆ ಅದಕ್ಕಾಗಿಯೇ ಚುನಾವಣೆಯ ಕಟ್ಟೆಯನ್ನು ಏರಿದ್ದರು.

(ಪುಟ 5ಕ್ಕೆ)

**THE MYSORE ASSOCIATION, BOMBAY.**

**MAGHI GANESH JAYANTHI**

On the auspicious occasion of **Maghi Ganesh Jayanthi** on 31st January 1998, special Pooja will be performed at 7-00 p.m.

All are cordially invited to participate in the pooja and receive the prasada.

Members desiring to do pooja in their name on that day should contact the office.

**PRIZE DISTRIBUTION FUNCTION**

There will be a function to distribute the prizes to the winners in the sports and talents competitions held recenrtly, on Sunday the 15th February 1998, at the Association, at 7-00 p.m.

Shri S. Doreswamy, President of the Association will preside.

The Fine Arts section of the Association will present Dr. Kirthinath Kurthukoti's play "Aa Mane" Directed by Dr. B. R. Manjunath.

After the play, the prizes will be given away by Smt. Lalitha Doreswamy.

All are cordially invited.

*Hon. Secretary*

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES, EAST WEST, MODI LUFT & JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

# REMEMBERING USHA



In life, we do come across - though not very often - a person who leaves an indelible good impression on us. The remarkable thing about such person is that the creation of such a good impression is not limited to a select few, but is generally across the board, amongst all those who interact with that person. Usha Jairam was one such rare person. Although she is no longer amidst us physically, she occupies an irreplaceable position in the minds and hearts of her friends. Friends who have closely worked with her in various organizations, are flooded with thoughts of Usha at each and every step.

As a tribute to Usha,, we have brought out a section of Nesaru titled "Remembering Usha Jairam". A few friends of Usha have shared their remembrances and feelings with the readers, in these columns. There are many more friends of Usha who, we feel, would be carrying similar feelings. Such was the personality of Usha.

*— Editor*

# USHA MY FRIEND

Very rarely you come across a person who makes such an impression on everyone Usha Jairam was one such person. I know Usha for almost 35 years. We became close friends around the time of the fund raising programme for Kannada Vanita Samaja. Always smiling, willing to help whatever the cause may be, if it helps the other person. There was no thought of any cast community or organisation.
I learnt from Usha, to help is Humane.

She found time to sit and chat.
She found time to sing.
She found time for poems.
She found time for play.
She found time for acting.
She found time for a picnic.
She found time to sit and enjoy a meal.
She found time for National and International meetings.
She found time to be on many a committee.
She found time for a marriage function, a upanayana or a birthday or any other function, with the same zeal.

Most of all, she was with sick, needy and unfortunate, who need the help most.

This is what Usha was that I knew & know and now I miss her.

I pray for the family to have strength to bear this loss.

*— Leela Rajkumar*



## REMEMBERING USHA JAIRAM

# USHA AND RELIEFWORK

*— Tara Shah*

It is but natural that our hearts are touched by the' sufferings of other human beings. Yet very few have the innate strength and sensitivity to work for the unfortunate victims with complete devotion and sincerity. Our Usha was such a person, who never thought of her personnel comforts, name and fame. Her capacity to organise, look after minute details, her modesty and earnestness won over every one who come to work with her. All that was best in her came out during period of crisis like the riots of 1992 in Mumbai, and the relief work for the earthquake afflicted of Killari.

On behalf of the Sion Wadala Branch of All India women's conference (AIWC), we have been working amongest families leading a very hard life. But what we saw in the Mahatma Gandhi Nagar Ziopadpati near our Mandal, with more than 200 families flabbergasted us. Like a bolt from the blue, antisocial elements looted their houses, even killed some of their near and dear ones, giving the whole affairs a communal colour. This was the first time we were faced with such a situation. Where to start relief work? How to pacify the hundreds of men, women and children? The inhuman barbarities committed on each other were beyond everyone's imagination. This was the first time we were faced with such a crisis. We decided to take up the challenge. Usha contacted the Times of India Riot Relief Committee, and through them many NGOs. We had made a survey, and put before them our needs. The Times Relief Committee gave blankets and other house hold materials. Other NGOs sent milk powder, medicines etc. Other branches of AIWC came to our help, donating rice, sugar, oil, and other consumer articles. Books and uniforms were distributed amongest needy children. More than that, great care had to be taken to see that the really, affected got help. For that, under Usha's directions we prepared identity cards and distributed amongest the needy families. She enthused our members and help came from various sections.

**All that was best in her came out during period of crisis like the riots of 1992 in Mumbai, and the relief work for the earthquake afflicted of Killari.**

**Great care had to be taken to see that the really affected got help. For that, under Usha's directions we prepared identity cards and distributed amongst the needy families.**

Then came the news of the terrible earthquake in Latur District. Thousands died, and many more were rendered homeless. Our Work-Centre members worked day and night, while others collected clothes, medicines and other necessary material. Two of our well-wishers collected two truck-loads of the articles, and personally distributed every-thing in killari, one of the worst - affected towns. Usha, as one of the secretaries of the Mumbai Branch Central Committee (MBCC) decided to visit Killari along with her two colleagues. They visited some villages, besides Killari, and brought back reports of the pitiable condition of women there, especially of those, who has last their husbands. Inspite of the troublesome journey to Killari, Usha visited the many times and made good contacts with a local women's organisation there, which could be a base of our activities there. M.B.C.C. constituted a Relief Committee, which draw up a plan to build a Training Centre in Killari, to enable the women to get training in various professions, and become self-sufficient. Funds were collected, and inspite of our consistent efforts, the plot on which we were to build the training Centre, and which was promised to us, is not being sanctioned by the officers concerned. The anguish being felt by us,is much more because Usha's efforts are not bearing fruits.

For today's up and coming social workers, Usha was a real role model. In every sense of the word, she was very 'human' At the same time, she never believed in giving doles to the oppressed and the needy. She believed in empowering them, making them self-reliant. For that reason only she rushed to help the unfortunate women of Killari and surrounding villages. ●

### ಕಾರಂತರು ಮರಳಿ ಮಣ್ಣಿಗೆ

(ಪುಟ 3ರಿಂದ)

ಕಾರಂತರದು ಅನ್ವೇಷಣಾ ಪ್ರವೃತ್ತಿ, ಚಿಕಿತ್ಸಕ ಮನೋಧರ್ಮ, ಪ್ರತಿಯೊಂದನ್ನೂ ಪರೀಕ್ಷಿಸಿ, ಶೋಧಿಸಿ ತೀರ್ಮಾನಿಸುವ ಛಲ, ಚಿತ್ತವೃತ್ತಿ ಹೀಗಾಗಿಯೇ ಅವರ ಕಾದಂಬರಿಗಳು ಸಮಾಜದ ಏಳು-ಬೀಳು, ನೋವು-ನಲಿವು, ಶೋಷಣೆ, ಕನಸುಗಳ ವಿಮರ್ಶಾತ್ಮಕ ಚಿತ್ರಣಗಳಾಗಿವೆ. ಕಾರಂತರು ಉತ್ತಮ ವಾಗ್ಮಿಗಳೂ ಆಗಿದ್ದರು. ಅವರ ಭಾಷಣವೆಂದರೆ ರಸದೌತಣ. ವಿಷಯವನ್ನು ಎಳೆ ಎಳೆಯಾಗಿ ಬಿಡಿಸಿ ಹೇಳುವ ಬಗೆ ಎಂಥವರಿಗೂ ಮನವರಿಕೆಯಾಗಬಲ್ಲುದಾಗಿತ್ತು. ಡಂಭದ ಮುಸುಕಿಲ್ಲದ ನೇರಮಾತು, ಸತ್ಯದ ಹೊಳಪು, ಹಾಸ್ಯದ ಚಟಾಕಿ, ಹಸಿರು ನುಡಿಯ ಹಕ್ಕಳ, ಪ್ರತಿಭೆಯ ಮಿಂಚಿನ ಸುಳಿ, ಇದು ಕಾರಂತರ ಭಾಷಣದ ಲಕ್ಷಣ. ಇಂಥ ಭಾಷಣದ ಸವಿಯನ್ನು ಸವಿಯುವ ಸುಯೋಗವನ್ನು ಮೈಸೂರು ಅಸೋಸಿಯೇಶನ್ನಿನ ಸದಸ್ಯರೂ ಸಹ ಮೂರು ದಿನಗಳ ಅವಿರತ ಕಾರ್ಯಕ್ರಮ '84ರ ದತ್ತಿ ಉಪನ್ಯಾಸದ ಸಂದರ್ಭದಲ್ಲಿ ಪಡೆದಿದ್ದರು. ಆಗ ಅವರಿಗೂ `82ಹರೆಯ. ಆಗಲೂ ತಮ್ಮ ಉಪನ್ಯಾಸಕ್ಕೆ ಪೂರಕವಾಗಿ ಮೂರು ಗಂಟೆಗಳ ಕಾಲ ಕಾರಂತರು ಕುಣಿದು ತಣಿಸಿದ್ದರು.

ಕಾರಂತರನ್ನು ಬಣ್ಣಿಸುವುದು ಅಸಾಧ್ಯ. ಅವರನ್ನು ವ್ಯಕ್ತಿಯೆಂದು ಪರಿಗಣಿಸಲಾಗದು. ಅವರೊಂದು ಧೀಮಂತ ಸ್ವರೂಪದ ಅದ್ಭುತ ಶಕ್ತಿ. ಕಣ್ಮರೆಯಾದ ಆ ಶಕ್ತಿಗೆ 'ನೇಸರು' ಭಕ್ತಿಪೂರ್ವಕವಾಗಿ ಶಿರಬಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ●



## REMEMBERING USHA JAIRAM

# USHA & THE MANDAL

— Purnima Srikrishna

Take a directory, a dictionary, yellow pages, who's who columns and whatever else you can think of and make a homogeneous mixture - result - Usha. Honestly she was our reference book. No problem was too big or too small or too difficult for her to tackle. What does one write about a person whose void cannot be filled? What does one say about a person who has been a role model to everyone who calls herself a social worker? Ushaben - Ushakka or plain Usha lived and breathed social work. We would like to think Mandal was top on her priority but so would all other organisations she was associated with, such was her dedication.

**Take a directory, a dictionary, yellow pages, who's who columns and whatever else you can think of and make a homogeneous mixture - result - Usha.**

Starting with a small but fiercely dedicated band of like minded social workers she was instrumental in conceiving project Mandal which aimed at empowering economically and educationally backward women with the means to hope for a better future. With single minded devotion she supervised each and every aspect of the mandal. Right from the constitution of the mandal to the mundane things like where to get paper at a better price. Usha was always conscious that the cause of women whom the mandal attempts to help could be best served by offering some productive work to the women of the economically depressed strata of society. She strained every nerve to ensure that. Towards this end she roamed the length and breth of the society in search of new a venues of work for the needy women of the Mandal. Thanks to her persuasion persistence and perseverance mandal has been successful in providing useful work for women not only to sustain their families but also give them a sense of pride and empowerment.

**What does one say about a person who has been a role model to everyone who calls herself a social worker? Ushaben - Ushakka or plain Usha lived and breathed social work**

Organising was her forte. From the choice of the chief guest to the last pin could be left on her overburdened shoulders and she would deliver with style and aplomb. So top on her priority was the mandal that she would cancel or even give up important personal engagements just to see the programme or project through. Such was her dedication.

**Organising was her forte. From the choice of the chief guest to the last pin could be left on her overburdened shoulders and she would deliver with style and aplomb.**

From the president to the newest incumbent in the mandal Usha knew them all. Not just their faces but their names, their interests, their problems their families - little details which made all the difference. Like a benevolent teacher she would not only scold, correct and pull up any one but also shower praises on the smallest of achievements.

Usha not only put forth her best for the mandal but had the unique ability to evoke the best in every member to serve the cause of the mandal. That is the true test of leadership and Usha was a leader in the true sense.

# ಸ್ನೇಹಮಯ ಉಷಾ ಜೈರಾಂ ಇನ್ನಿಲ್ಲ!

ತಾ. 21-10-1997ರಂದು ನಮ್ಮನ್ನಗಲಿದ ಶ್ರೀಮತಿ ಉಷಾಜಯರಾಂರವರಿಗೆ ಮೈಸೂರು ಅಸೋಸಿಯೇಷನ್ನಿನಲ್ಲಿ ತಾ. 26-10-1997ರಂದು ಶೋಕ ಸಭೆಯನ್ನೇರ್ಪಡಿಸಿ ಶ್ರದ್ಧಾಂಜಲಿಯನ್ನರ್ಪಿಸಲಾಯ್ತು. ಅಂದು ಅವರು ದುಡಿದಿರುವ ಮುಂಬೈನ ಅನೇಕಾನೇಕ ಸಂಘ ಸಂಸ್ಥೆಗಳ ಸದಸ್ಯರು ಹಾಗೂ ಅವರ ಸಂಪರ್ಕ ಹೊಂದಿದ ವ್ಯಕ್ತಿಗಳು ಭಾರದ ಹೃದಯದಿಂದ ಭಾಗವಹಿಸಿ ತಮ್ಮ ಶ್ರದ್ಧಾಂಜಲಿಯನ್ನರ್ಪಿಸಿದರು.

ನನ್ನ ಹಾಗೂ ಉಷಾ ಆಂಟಿಯವರ ನಿಕಟ ಪರಿಚಯವಾದದ್ದು ತುಂಬಾ ಇತ್ತೀಚೆಗೆ ಶ್ರೀಮತಿ ಗೀತಾ ವಿಶ್ವನಾಥ್‌ರವರು ಬರೆದು ನಿರ್ದೇಶಿಸುತ್ತಿದ್ದ ನಾಟಕ 'ದೇವನೆಲ್ಲಿಹನೋ!' ದಲ್ಲಿ ನಾನು ಹಾಗೂ ಉಷಾ ಆಂಟಿ ಇಬ್ಬರೂ ಹಿನ್ನೆಲೆ ಸಹಾಯ (Back Stage Work) ಕರಾಗಿ ಕೆಲಸ ಮಾಡುತ್ತಿದ್ದೆವು. ಈ ಸನ್ನಿವೇಶದಲ್ಲಿ ಅವರ ಸ್ನೇಹ ಸ್ವಭಾವದ ಪರಿಚಯ ಚೆನ್ನಾಗಿಯೇ ಆಯ್ತು. ನಾಟಕದ ದಿನ ನಾನು ಹಿನ್ನೆಲೆ ಸಹಾಯಕಿಯಾಗಿ ಮಾಡಿದ್ದು ಅಷ್ಟರಲ್ಲೇ ಇದ್ದರೂ ಅವರು ನನ್ನನ್ನ ಉಮಾರಾವ್‌ರವರಿಗೆ ಪರಿಚಯಿಸುತ್ತಾ "ನೋಡಿ ಇವರು ರಮಾ ಕೃಷ್ಣಸ್ವಾಮೀಂತ ತುಂಬಾ Sicereಆಗಿ Back Stage Work ಮಾಡ್ತಾರೆ, ನೀವು ಒಂದು ನಾಟಕ ಬರೆದು ಆಡಿಸಿಬಿಡಿ ಸಹಾಯಕ್ಕೆ ಇವರಿದ್ದಾರೆ'ಎಂದು ಹೇಳಿದರು. ಯಾರೇ ಆಗಲಿ ಕಡ್ಡಿಯಷ್ಟು ಕೆಲಸ ಮಾಡಿದ್ದರೂ ಅದನ್ನು ದೊಡ್ಡದೆಂದೆಣಿಸಿ ಅವರ ಬೆನ್ನು ತಟ್ಟಿ ಅವರಿಂದ

(ಪುಟ 16ಕ್ಕೆ)



ಅಸೋಸಿಯೇಷನ್ನಿನ ವಜ್ರ ಮಹೋತ್ಸವದಲ್ಲಿ ವೇದಿಕೆಯ ಮೇಲೆ ಉಷಾ



# REMEMBERING USHA JAIRAM

# ನಾ ಕಂಡ ಉಷಾ

● ಸುಮಿತ್ರಾ ಚಂಪಕ್‌ನಾಥ್

ನಾನು ಸುಮಾರು 40ವರ್ಷದ ಹಿಂದೆ ಬಾಂದ್ರಾವಿನಲ್ಲಿ ನಡೆದ ಒಂದು ಸಂಗೀತ ಕಾರ್ಯಕ್ರಮದಲ್ಲಿ ಶ್ರೀಮತಿ ಉಷಾ ಜಯರಾಂರವರ ತಂಗಿ ಶ್ರೀಮತಿ ಸುಧಾ ಆಚಾರ್ಯರವರನ್ನು ಸಂಧಿಸಿದೆನು. ಶ್ರೀ ಆಚಾರ್ಯರು ನನ್ನ ಯಜಮಾನರ ಆಪ್ತ ಸ್ನೇಹಿತರ ತಮ್ಮನವರಾಗಿದ್ದರಿಂದ ಶೀಘ್ರ ಪರಿಚಯವಾಯಿತು. ಅವರುಗಳ ಮೂಲಕ ಶ್ರೀಮತಿ ಉಷಾ ಮತ್ತು ಶ್ರೀ ಜಯರಾಂರವರ ಪರಿಚಯವಾಯಿತು. ಕೆಲವೇ ದಿನಗಳಲ್ಲಿ ಪರಸ್ಪರ ಆಕರ್ಷಿತರಾಗಿ ಒಂದೇ ಮನೆಯವರಂತೆ ಭಾವಿಸಿ, ಅಕ್ಕ ತಂಗಿಯರಂತಾದೆವು. ಈ ದಿನದವರೆಗೂ ಅದೇ ಭಾವನೆ ಬೆಳೆಸಿಕೊಂಡಿದ್ದೇವೆ. ಮತ್ತು ಈಗಲೂ ಶ್ರೀ ಜಯರಾಂ ನನ್ನ ಅಣ್ಣನಂತೆಯೇ ಭಾವಿಸಿದ್ದೇನೆ. ನನ್ನನ್ನು ಮೊದಲು ಶ್ರೀಮತಿ ಉಷಾರವರು RBI Qtrs.ಲ್ಲಿ ನಡೆಸುತ್ತಿದ್ದ ಕನ್ನಡ ವನಿತಾ ಸಮಾಜಕ್ಕೆ (KVS) ಮೆಂಬರ್ ಮಾಡಿದರು. ನಾವುಗಳು ಜೊತೆಯಲ್ಲಿಯೇ ಎಲ್ಲಾ ಕಡೆಗೂ ಹೋಗಿ ಬರುತ್ತಿದ್ದೆವು. ಅವರ ಔದಾರ್ಯ , ಎಲ್ಲದರಲ್ಲೂ ಮಕ್ಕಳಂತಹ ಉತ್ಸಾಹ, ಯಾವಾಗಲೂ ಹಸನ್ಮುಖಿಯಾಗಿ ಇನ್ನೊಬ್ಬರ ಕಷ್ಟ ಸುಖಗಳಲ್ಲಿ ಭಾಗಿಯಾಗುವುದು, ಎಂದಿಗೂ ಉದಾತ್ತ ಭಾವನೆಗಳು -ಇವೆಲ್ಲವೂ ನನ್ನ ಜೀವನದಲ್ಲಿ ಬಹಳ ದೊಡ್ಡ ಪರಿಣಾಮ ಮಾಡಿದೆಯೆಂದು ಹೇಳಬಹುದು. ಅವರು ನನ್ನನ್ನು ಬಹಳವಾಗಿ ಹುರಿದುಂಬಿಸಿ KVS Committeeಯಲ್ಲೂ ಸಹಾಯ ಮಾಡಲು ಸೇರಿಸಿಕೊಂಡರು. ಅವತ್ತಿನಿಂದ ಅವರನ್ನು ನನ್ನ ಗುರುವೆಂದೇ ಭಾವಿಸುತ್ತೇನೆ. ಏಕೆಂದರೆ ಒಂದು ಸಾರ್ವಜನಿಕ ಸಂಸ್ಥೆಯಲ್ಲಿ ಹೀಗೆ ಎಲ್ಲರಿಗೂ ಹೊಂದುವಂತೆ ಕೆಲಸ ಮಾಡಬೇಕು, ಎಷ್ಟೊಂದು ತಾಳ್ಮೆಯಿಂದಿರಬೇಕು, ಎಷ್ಟೋ ನಿಷ್ಠುರಗಳಿದ್ದರೂ ಸಹಿಸಿಕೊಂಡು ಬೇರೆಯವರಿಗೆ ಮನನೋಯಿಸದಂತೆ ನಡೆದುಕೊಳ್ಳುವುದು -ಇವೆಲ್ಲವನ್ನು ಅವರ ಮಾರ್ಗದರ್ಶನದಿಂದಲೇ ಕಲಿತೆನು. ನಾನಂತೂ ಅವರೆಗೂ ಬೊಂಬಾಯಿನಲ್ಲಿ ಯಾವ ಸಾರ್ವಜನಿಕ ಸಂಸ್ಥೆಯಲ್ಲೂ ಭಾಗವಹಿಸಿರಲಿಲ್ಲ ಮತ್ತು ಯಾವ ವಿಧವಾದ ಅನುಭವವೂ ಇರಲಿಲ್ಲ. ಅವರ ಜೊತೆಯಲ್ಲಿದ್ದುದರಿಂದ. ನಾನಾವಿಧವಾದ ನಾನಾ ರೀತಿಯ ಜನಗಳಲ್ಲಿ ಸಂದರ್ಭಾನುಸಾರ ಹೇಗೆ ನಡೆದುಕೊಳ್ಳಬೇಕೆಂಬುದರಲ್ಲಿ ಅವರೇ ಮೇಲ್ಪಂಕ್ತಿಯಾಗಿದ್ದರು. ನಾವಿಬ್ಬರೂ ಸುಮಾರು 30ವರ್ಷಗಳ ಕಾಲವಂತೂ ಬೊಂಬಾಯಿ ಒಳಗಡೆ, ಹೊರಗಡೆ ಒಟ್ಟಾಗಿ ಓಡ್ಯಾಡಿಕೊಂಡಿರುತ್ತಿದ್ದೆವು. ನಮ್ಮ ಸ್ನೇಹಿತರುಗಳು ನಮ್ಮನ್ನು Driver, Conductor ಎಂದು ಕರೆಯುತ್ತಿದ್ದರು. ಹೊರಗಿನಿಂದ ಮನೆಗೆ ಬರಲು ಬಹಳ ತಡವಾದರೂ ನಮ್ಮಿಬ್ಬರ ಮನೆಗಳಲ್ಲೂ ನಾವುಗಳು ಒಟ್ಟಿಗೆ ಹೋಗಿದ್ದೆವೆಂದು ತಿಳಿದಮೇಲೆ ನಿರಾಳೋಚನೆಯಿಂದಿರುತ್ತಿದ್ದರು. ಅವರು ಎಲ್ಲದರಲ್ಲೂ ಮುನ್ನುಗ್ಗಿ ಕೆಲಸ ಮಾಡುತ್ತಿದ್ದರೆ ನಾನು ಕೇವಲ ಹಿಂದಿನಿಂದ ಬೆಂಬಲವಿತ್ತೆ. ಮೈಸೂರು ಅಸೋಸಿಯೇಷನ್, KVS, ಮಹಿಳಾ

ಅವರನ್ನು ತಾಳ್ಮೆಯ ಗಣಿಯೆಂದು ಕರೆಯಬಹುದು. ಯಾವಾಗಲೂ ಹಸನ್ಮುಖಿಯರಾಗಿ ಎಲ್ಲರನ್ನೂ ವಿಚಾರಿಸುತ್ತಾ ಜನರನ್ನು ಶೇಖರಿಸುವುದಾಗಲಿ, ಸಂಪರ್ಕಿಸುದರಲ್ಲಾಗಲಿ ಅವರು ಎತ್ತಿದ ಕೈ ಆಗಿದ್ದರು.

ಮಂಡಳಿ ಮುಂತಾದ ಸಂಸ್ಥೆಗಳ ಕಾರ್ಯದಲ್ಲಿ ನಾವಿಬ್ಬರೂ ಕುಲಾಬಾದಿಂದ ಬೋರಿವಲಿ, ದೊಂಬಿವಲಿ ತನಕ ಪರಿಚಯಸ್ಥರು ಅಥವಾ ಅಪರಿಚಯಸ್ಥರು ಎಲ್ಲರ ಮನೆಗೂ ಭೇಟಿ ಮಾಡಿದ್ದೇವೆ. ಎಲ್ಲಾ ಅಂತಸ್ತಿನವರನ್ನೂ ಸಂಧಿಸಿದ್ದೇವೆ. ಟಿಕೇಟು ಮಾರುವುದಕ್ಕಾಗಲಿ, Advt.ಗಾಗಲೀ, ಹಣ ಸಂಗ್ರಹಣೆಗಾಗಲೀ ಹೋದಲ್ಲಿ ಅವರಲ್ಲಿದ್ದ ಒಂದು Special Charisma ಎಲ್ಲರನ್ನು ಸೆಳೆಯುತ್ತಿತ್ತು. ಮತ್ತು ಯಾರೂ ನಮ್ಮನ್ನು ಬರಿಕೈಯಲ್ಲಿ ಕಳುಹಿಸುತ್ತಿರಲಿಲ್ಲ. ನಾವುಗಳು ಹೋದಕಡೆ ಚಾಚಿದ ಕೈಗಳಿಂದ ಸ್ವಾಗತ ವಿತ್ತೇ ಹೊರತು ಬೇರೆ ತರಹ ಅನುಭವ ನಮಗೆ ಬರುತ್ತಿರಲಿಲ್ಲ. ಅವರನ್ನು Walking encyclopediaಎಂದು ಧಾರಾಳವಾಗಿ ಹೇಳಬಹುದಾಗಿತ್ತು. ಯಾರ ಮನೆಗೆ ಹೋದರೂ ಅವರ ಕುಶಲ ಕ್ಷೇಮಗಳನ್ನು ಕೂಲಂಕುಶವಾಗಿ ವಿಚಾರಿಸುತ್ತಾ ಅವರ ಆತಿಥ್ಯಗಳನ್ನು ಸ್ವೀಕರಿಸುತ್ತಾ ತಾವು ಬಂದ ಕಾರ್ಯವನ್ನು ಬೇಗನೆ ಹೇಳುತ್ತಿರಲಿಲ್ಲ. ಬೇಗನೆ ವಿಷಯಕ್ಕೆ ಬರಬೇಕೆಂದು ಹಿಂದಿನಿಂದ ಅವರಿಗೆ ಜ್ಞಾಪಿಸುವುದೇ ನನ್ನ ಕೆಲಸವಾಗುತ್ತಿತ್ತು. ಆದ್ದರಿಂದ ನಾವು ಹಾಕಿದ prog.ನಂತೆ ನಡೆಯಲು ಸಾಧ್ಯವಾಗುತ್ತಿರಲಿಲ್ಲ, ಸ್ವಲ್ಪ ವಿಳಂಬವಾಗುತ್ತಿತ್ತು. ಸಾಧಾರಣವಾಗಿ ಎಲ್ಲ ತರಹ ಯೋಜನೆಗಳಲ್ಲಿ ಅವರದ್ದೇ ಸಿಂಹಪಾಲು. ಮನಸ್ಸಿಗೆ ಎಷ್ಟೇ ಕಷ್ಟ ಬರಲಿ, ದೇಹಕ್ಕೆ ಎಷ್ಟೇ ತೊಂದರೆಯಿರಲಿ, ಕೈಯಿಂದ ಸ್ವಂತದ್ದೇ ಎಷ್ಟೋ ಹಣ ಖರ್ಚಾದರೂ ಯಾವುದನ್ನೂ ಲೆಕ್ಕಿಸದೆ ಎಲ್ಲವನ್ನೂ ಸಂತೋಷದಿಂದ ನಿಭಾಯಿಸುತ್ತಿದ್ದರು. ಯಾವ ಕಾರಣಗಳಿಗೂ ಅವರು ಕೋಪಗೊಂಡದ್ದೇ ನಾನು ನೋಡಲಿಲ್ಲ. ಅವರನ್ನು ತಾಳ್ಮೆಯ ಗಣಿಯೆಂದು ಕರೆಯಬಹುದು. ಯಾವಾಗಲೂ ಹಸನ್ಮುಖಿಯರಾಗಿ ಎಲ್ಲರನ್ನೂ ವಿಚಾರಿಸುತ್ತಾ ಜನರನ್ನು ಶೇಖರಿಸುವುದಾಗಲಿ, ಸಂಪರ್ಕಿಸುದರಲ್ಲಾಗಲಿ ಅವರು ಎತ್ತಿದ ಕೈ ಆಗಿದ್ದರು. ಎಂತಹ ದೊಡ್ಡ ಯೋಜನೆಗಳಿದ್ದರೂ ಅವರಿಗೇನೂ ಭಾರವಾಗಿ ತೋರಿದಂತೆ ಕಾಣಿಸುತ್ತಿರಲಿಲ್ಲ. ಅವರ Organising capacityಯಂತೂ ಆಶ್ಚರ್ಯ ಪಡುವಂತಿತ್ತು. ಯಾವದಾದರೂ ಸರಿ, ಕೂಲಂಕುಶವಾಗಿ ಯೋಚಿಸಿ ಚಿಕ್ಕ ವ್ಯತ್ಯಾಸವೂ ಆಗದಂತೆ ಬಹಳ ಜೋರಾಗಿ ನಡೆಸಿಕೊಡುತ್ತಿದ್ದರು. ತನ್ನ ಸ್ವಂತದ ಆಶೆ ಅಭಿಲಾಷೆಗಳನ್ನೆಲ್ಲಾ ಬಿಟ್ಟು ಸಂಸ್ಥೆಗಳ ಕೆಲಸಗಳನ್ನು ದೇವರ ಕಾರ್ಯವೆಂದೆಣಿಸಿ ಯಾವ ಲೋಪವೂ ಬಾರದಂತೆ ನಿರ್ವಹಿಸುತ್ತಿದ್ದರು. ಅವರ ಜಾಣ್ಮೆಯಂತೂ ಜನಮೆಚ್ಚುಗೆಯನ್ನು ಪಡೆದಿತ್ತು.

ಅವರ Organising capacityಯಂತೂ ಆಶ್ಚರ್ಯ ಪಡುವಂತಿತ್ತು. ಯಾವದಾದರೂ ಸರಿ, ಕೂಲಂಕುಶವಾಗಿ ಯೋಚಿಸಿ ಚಿಕ್ಕ ವ್ಯತ್ಯಾಸವೂ ಆಗದಂತೆ ಬಹಳ ಜೋರಾಗಿ ನಡೆಸಿ ಕೊಡುತ್ತಿದ್ದರು.

ಹಿಂದೆ ಶ್ರೀ ರಾಮಕೃಷ್ಣ ಹೆಗ್ಡೆಯವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ನಮ್ಮ KVSಗೆ ಸುಮಾರು ರೂ. $5\frac{1}{2}$ಲಕ್ಷದ grant ನ್ನು creche projectಗಾಗಿ ಮಂಜೂರು ಮಾಡಿದ್ದರು. ಅಷ್ಟು ದೊಡ್ಡ grant ಬರಬಹುದೆಂದು ಯಾರೂ ಕನಸಿನಲ್ಲಿಯೂ ನೆನೆಸಿರಲಿಲ್ಲ. ಅವರ ಪತ್ರವು, ಆ ವರ್ಷದ ಲೆಕ್ಕ ಮುಗಿಯಲು ಕೇವಲ 2ದಿವಸ ಮುಂಚೆ ಬಂದು ತಲುಪಿತು. ಆ ಮೊಬಲಗನ್ನು ನಾವುಗಳು March 31ಕ್ಕೆ ಮುಂಚೆ ಹೇಗಾದರೂ ಮಾಡಿ ತೆಗೆದುಕೊಳ್ಳಬೇಕಾಗಿತ್ತು. ತಕ್ಷಣವೇ ಶ್ರೀಮತಿ ಉಷಾ ಮತ್ತೊಬ್ಬ ಕಮಿಟಿ ಮೆಂಬರ್ ಜೊತೆಯಲ್ಲಿ ಅವರ ಸ್ವಂತ ಹಣದಲ್ಲಿ ಬೆಂಗಳೂರಿಗೆ ವಿಮಾನದಲ್ಲಿ ಬಂದು

ಇಲ್ಲಿನ ಸೆಕ್ರೆಟರಿ ಅಧಿಕಾರಿ ವರ್ಗದವರನ್ನೆಲ್ಲಾ ಹಿಡಿದು ಮಾರ್ಚ್ 31ರಾತ್ರಿ 12ಘಂಟೆಯ ವೇಳೆಗೆ ತಮ್ಮಲ್ಲಿ Cheque release ಮಾಡುವಂತೆ ಬಹಳ ಶ್ರಮಪಟ್ಟರು. ಅವರು ಪಟ್ಟ ಶ್ರಮವನ್ನಂತೂ ಹೇಳತೀರದು. ಆದರೂ ಯಾವುದನ್ನೂ ತೋರ್ಪಡಿಸದೆ ಯಾವ ಹೆಸರಿಗಾಗಲೀ, ದೊಡ್ಡಸ್ತಿಕೆಗಾಗಲೀ ಕೆಲಸ ಮಾಡದೆ ಪ್ರತಿಫಲಾಪೇಕ್ಷೆಯಿಲ್ಲದೆ ನಿರ್ವಂಚನೆಯಿಂದ ದುಡಿದ ಉದಾರ ವ್ಯಕ್ತಿ........? ಮೇಲಿನ ಮಾತುಗಳು ಯಾವುದೂ ಉತ್ಪ್ರೇಕ್ಷೆಯಿಂದೆಣಿಸಬೇಡಿ, ಎಲ್ಲವೂ ನನ್ನ ಅನುಭವದ ಮಾತು, ನಿಮ್ಮೆಲ್ಲರುಗಳಿಗೂ ಸಹ ಅನುಭವಕ್ಕೆ ಬಂದದ್ದು. ಮೈಸೂರು ಅಸೋಸಿಯೇಷನ್‌ನ Golden Jubilee ವರ್ಷದಲ್ಲಿ ತಿಂಗಳಿಗೊಂದು ನಾಟಕ, prog.ಗಳು ನಡೆಯುತ್ತಲೇ ಇರುತ್ತಿತ್ತು. ಹೊರಗಿನಿಂದ ಕಲಾವಿದರೇ ಮುಂತಾಗಿ ಅತಿಥಿಗಳು ಬರುವ ಏರ್ಪಾಡಾಗಿತ್ತು. ಬೆಳಿಗ್ಗೆ ಅತಿಥಿಗಳನ್ನು ಬರಮಾಡಿಸಿ ಇಳಿಸಿಕೊಳ್ಳುವುದರಿಂದ ಹಿಡಿದು ಅವರ ಉಟೋಪಚಾರ, ಸಾಯಂಕಾಲದ prog.ಗೆ ಅಣಿಮಾಡುವುದು, ಹೂಗುಚ್ಛಗಳ ನ್ನೊದಗಿಸುವುದು ಅವುಗಳ ಜೊತೆಗೆ ಸಾಯಂಕಾಲದ ನಾಟಕಗಳಲ್ಲಿ ಪಾತ್ರಾಭಿನಯಗಳೂ ಇವೆಲ್ಲವನ್ನು ಉತ್ಸಾಹದಿಂದ ಸ್ವಲ್ಪವೂ ಬೇಸರವಿಲ್ಲದೆ ಮಾಡುತ್ತಿದ್ದರು. ಡ್ರಾಮ practiceಸಮಯದಲ್ಲಿ ರಾತ್ರಿ 1-2ಘಂಟೆಯಲ್ಲಿ ಮನೆ ತಲುಪುತ್ತಿದ್ದರು. ಅವರ ಬೆಂಬಲಕ್ಕೆ ನಾನು ಅವರುಗಳ ಜೊತೆಯಲ್ಲಿ ಇರುತ್ತಿದ್ದನು. ಅವರ ಉತ್ಸಾಹದಲ್ಲಿ ಅವರಿಗೆ ಊಟ ನಿದ್ದೆಗಳ ಪರಿವೆಯೇ ಇರುತ್ತಿರಲಿಲ್ಲ. ನಮ್ಮಗಳ ಯೋಜನೆಗಳೆಲ್ಲೆಲ್ಲಾ ಶ್ರೀ ಜಯರಾಂರವರೂ ಭಾಗಿಗಳಾಗಿ ನಮ್ಮ ಜೊತೆಗೂ ದುಡಿಯುತ್ತಿದ್ದರು.

ಅವರು ದೊಡ್ಡ ಕಲಾಭಿಮಾನಿಗಳೂ ಸಹ ಆಗಿದ್ದರು. ಸಂಗೀತ, ನೃತ್ಯ, ಭಾಷಣ, ಚಿತ್ರಕಲೆ,ನಾಟಕ, ಸಾಹಿತ್ಯ ಮುಂತಾದ ಎಲ್ಲದಲ್ಲೂ ಒಳ್ಳೆಯ ಅಭಿರುಚಿ. ನಾಟಕಗಳಲ್ಲಿ ಪಾತ್ರವಹಿಸುವುದು ಅವರ ವಿಶೇಷ ಕಲೆಯಾಗಿತ್ತು. ಯಾವ ಪಾತ್ರ ಕೊಟ್ಟರೂ ಸಹ ಚೆನ್ನಾಗಿ ಅಭಿನಯಿಸುತ್ತಿದ್ದರು. ಅವರ ಜೊತೆಗೆ ಶ್ರೀ ಜಯರಾಂ ಮತ್ತು ಮಗಳು ಸರಿತಾ ಸಹ ಅಷ್ಟೇ ಚೆನ್ನಾಗಿ ಅಭಿನಯಿಸುತ್ತಿದ್ದದ್ದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಭಾಷಣವನ್ನು ಸಂದರ್ಭಕ್ಕೆ ತಕ್ಕಂತೆ ಒಪ್ಪಿಗೆಯಾಗಿ ಮಾಡುತ್ತಿದ್ದರು. ಸಂಗೀತ ಜ್ಞಾನ ವಿಪರೀತವಾಗಿದ್ದರೂ ಹಾಡುತ್ತಿರಲಿಲ್ಲ. ಕರ್ನಾಟಕ ಮತ್ತು ಹಿಂದೂಸ್ತಾನಿ ಶೈಲಿಯ ಹಾಡುಗಳನ್ನು appreciate ಮಾಡುತ್ತಿದ್ದರು. ಯಾವ ಹೊಸ ಹಾಡಿನ Casette ಬಿಡುಗಡೆಯಾದರೂ ಅಂಗಡಿಗೆ ಹೋಗುವ ಅವಶ್ಯಕತೆಯಿರಲಿಲ್ಲ. ಅವರ ಮನೆಯಲ್ಲಿ ಎಲ್ಲವೂ ಸಿಗುತ್ತಿತ್ತು. ಸಾಧಾರಣವಾಗಿ ಬೊಂಬಾಯಿನ ಎಲ್ಲಾ Cultural prog.ಗಳಿಗೆ ತಪ್ಪದೆ ಹೋಗುತ್ತಿದ್ದರು ಮತ್ತು ನಮ್ಮನ್ನೆಲ್ಲಾ ಹುರಿದುಂಬಿಸಿ ಕರೆದುಕೊಂಡು ಹೋಗುತ್ತಿದ್ದರು. ಇವುಗಳೆಲ್ಲದರ ಜೊತೆಗೆ ಒಳ್ಳೆಯ critic ಸಹ ಆಗಿದ್ದರು.

**ನಾನು ತಿಳಿದ ಮಟ್ಟಿಗೆ KVS, ಮಹಿಳಾ ಮಂಡಳಿ, ಮೈಸೂರು ಅಸೋಸಿಯೇಷನ್ ಎಲ್ಲದರಲ್ಲೂ ಅಡಿಗಲ್ಲಾಗಿ ನಿಂತು, ಅವು ಇಂದು ಬೃಹದಾಕಾರದಲ್ಲಿ ಬೆಳೆದು ಜೋರಾಗಿ ನಿಂತಿರುವುದು ಉಷಾರವರಿಂದಲೇ ಎಂದು ಹೆಮ್ಮೆ ಯಿಂದ ಹೇಳಬಲ್ಲೆನು.**

A.I.W.C.ಮಹಿಳಾ ಮಂಡಲಿ ಯಲ್ಲಂತೂ ಬಡಹೆಂಗಸರಿಗಾಗಿ ಅವರ ಜೀವನವನ್ನೇ ಅರೆದಿದ್ದಾರೆ. ಬಡಮಕ್ಕಳ ಉದ್ಧಾರಕ್ಕಾಗಿ, ಸಾಕ್ಷರತೆಗಾಗಿ ಸಾಧ್ಯವಾದಷ್ಟು ಕೆಲಸಮಾಡಿದ್ದಾರೆ. ಹಬ್ಬ ಹರಿದಿನಗಳು ಬಂತೆಂದರೆ ಸಾಕು, ಮೂಲೆ, ಮೂಲೆಗಳಿಂದ ಉಷಾರವರಿಗೆ ತಿಂಡಿಗಳ order ಬರುತ್ತಿತ್ತು. ಅವುಗಳನ್ನು ತಮ್ಮ ಮನೆಯಲ್ಲಿಯೇ ಕರಿಸಿಕೊಂಡು (ಅಡುಗೆ ಮನೆ ಪೂರಾ ತಿಂಡಿಗಳ ರಾಶಿ) ಎಲ್ಲವನ್ನು ಸಮಯಕ್ಕೆ ಸರಿಯಾಗಿ ಹಂಚುತ್ತಿದ್ದರು. ಮತ್ತು ಎಷ್ಟೋ ಸಲ ಸ್ವತಃ ತಲುಪಿಸುತ್ತಿದ್ದರು.

ಇನ್ನು ಅವರ ಮನೋ ಕ್ಷೇತ್ರದ ವಿಷಯ. ಅವರ ಮನೆಯ ಆದರಾತಿಥ್ಯಗಳನ್ನು ಬೊಂಬಾಯಿನವರಿಗೆ, ಬಂಧು ಬಳಗದವರಿಗೆ ವಿವರಿಸುವ ಅವಶ್ಯಕತೆಯೇ ಇಲ್ಲ. ಯಾರಿಗಾದರೂ ಸರಿ ಪಂಚಭಕ್ಷ್ಯ ಪರಮಾನ್ನದ ಭಾರಿ ಔತಣಗಳಾಗುತಿತ್ತು. ಬಂದವರಿಗೆಲ್ಲಾ ಎಷ್ಟು ಉಣಿಸಿದರೂ ಅವರಿಗೆ ತೃಪ್ತಿ ಇಲ್ಲ. ಅವರು ಮಾಡುತ್ತಿದ್ದ ಅಪ್ಪಿಪಾಯಸದ ರುಚಿ ಇನ್ನೂ ನನ್ನ ನಾಲಿಗೆಯ ತುದಿಯಲ್ಲಿದೆ. ಎಲ್ಲವನ್ನು ಬಹಳ ರುಚಿಯಾಗಿ ಮಾಡುತ್ತಿದ್ದರು. ಯಾವ ಸಮಯಕ್ಕೆ ಹೋದರೂ ಸಹ ತಿಂಡಿಯಿಲ್ಲದೆ ಬರಿಯ ಕಾಫಿ ಮಾತೇ ಇಲ್ಲ. ಮೊನ್ನೆ ಅವರು ಬಹಳ ಹಾಸಿಗೆ ಹಿಡಿದು ಮಲಗಿದ್ದಾಗಲೂ ಬರಿಯ ಕಾಫಿ ಸಾಲದೆಂದು ಸನ್ನೆ ಮಾಡಿ ನಮಗೆಲ್ಲಾ ತಿಂಡಿ ಕೊಡಲೇಬೇಕೆಂದು ಒತ್ತಾಯಿಸಿದ್ದರು. ಅವರ ತಾಯಿ, ತಂಗಿ, ತಮ್ಮ ಎಲ್ಲರ ಮನೆಯಲ್ಲಿಯೂ ಅದೇ systemಮಾತ್ರ ಅವರ ಊಟೋಪಚಾರಗಳೆಲ್ಲಾ ಮರೆಯಲಾಗ ದಂತಹದ್ದು. ನನಗೆ ಅಮೆರಿಕಾದಲ್ಲಿ ಅವರ ತಂಗಿ, ತಮ್ಮ, cousinಗಳ ಮನೆಯಲ್ಲಿಯೂ ಸಹ ಅದೇ ಅನುಭವಗಳಿವೆ. ಅವರ ಅತ್ತೆಯವರಿದ್ದಾಗ ಅವರನ್ನ ಕೊನೆಗಾಲದವರೆಗೂ ಬಹಳ ಪ್ರೀತ್ಯಾದರಗಳಿಂದ ನೋಡಿಕೊಂಡಿದ್ದರು. ಅವರಿಗಾಗಿ ತಮ್ಮ ಅಡಿಗೆ ಮನೆಯನ್ನೇ ಬಿಟ್ಟುಕೊಟ್ಟು ಅವರ ಮಡಿ ಆಚಾರಗಳಿಗೆ ಕುಂದು ಬರದಂತೆ, ಅವರಿಗೆ ಮನ ನೋಯಿಸದಂತೆ ನೋಡಿಕೊಂಡಿದ್ದರು. ಕೊನೆಯವರೆಗೂ ಅವರ ಪ್ರೀತಿ ವಿಶ್ವಾಸ ಪಾತ್ರರಾಗಿದ್ದು ಅಚ್ಚು ಮೆಚ್ಚಿನ ಸೊಸೆ ಯಾಗಿದ್ದರು. ಅವರ ಅತ್ತೆಯವರು ಮಡಿ ಆಚಾರಗಳನ್ನಿಟ್ಟುಕೊಂಡಿದ್ದರೂ ಬಹಳ ವಿಶಾಲ ಹೃದಯಿಗಳಾಗಿದ್ದರು. ಉಷಾರವರು ಹೊರಗಡೆಯ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಉತ್ತೇಜನ ಕೊಡುತ್ತಿದ್ದರು. ಉಷಾರವರು ಹೊರಗಡೆ ಅಷ್ಟೊಂದು ಕೆಲಸ ಮಾಡುತ್ತಿದ್ದರೂ ಮನೆಯನ್ನು ಎಂದಿಗೂ ಅಲಕ್ಷಿಸಿರಲಿಲ್ಲ.

ನಮ್ಮ ಮನೆಯ ಯಾವುದೇ ಸಮಾರಂಭ ದಲ್ಲಿಯೂ ಉಷಾ ಜಯರಾಂಗಳಿಲ್ಲದೆ ಸಾಧ್ಯವಿರುತ್ತಿರಲಿಲ್ಲ. ನಮ್ಮ ಕುಟುಂಬದಲ್ಲಿಯೇ ಅವರು ಬಹಳ popularಆಗಿದ್ದರು. ನಮ್ಮ ಸುಖದುಃಖಗಳಲ್ಲಿ ಎಲ್ಲ ಅವರೂ ಭಾಗವಹಿಸಿದ್ದಾರೆ. ನಮ್ಮ ಮಕ್ಕಳಿಗಂತೂ ಉಷಾ ಎಂದರೆ ಪಂಚಪ್ರಾಣ. ಮೊನ್ನೆ ಮೊನ್ನೆ ಸಹ ನನ್ನ ಮಗ ಉಷಾರವರನ್ನು ಜ್ಞಾಪಿಸಿಕೊಂಡು ಅಮೆರಿಕಾದಿಂದ ನನಗೆ phone ಮಾಡಿದ್ದನು. ಮತ್ತು ಬಹಳವಾಗಿ ನೊಂದು ಮಾತನಾಡಿದನು. ನನ್ನ ಮಗಳಂತೂ ಅವರ ಮಗಳಂತೆಯೇ ಸಲುಗೆಯಾಗಿದ್ದಳು.

ನಾನು ತಿಳಿದ ಮಟ್ಟಿಗೆ KVS ಮಹಿಳಾ ಮಂಡಳಿ, ಮೈಸೂರು ಅಸೋಸಿಯೇಷನ್ ಎಲ್ಲದರಲ್ಲೂ ಅಡಿಗಲ್ಲಾಗಿ ನಿಂತು, ಅವು ಇಂದು ಬೃಹದಾಕಾರದಲ್ಲಿ ಬೆಳೆದು ಜೋರಾಗಿ ನಿಂತಿರುವುದು ಉಷಾರವರಿಂದಲೇ ಎಂದು ಹೆಮ್ಮೆಯಿಂದ ಹೇಳಬಲ್ಲೆನು. ಇನ್ನೆಷ್ಟು ಬರೆದರೂ ಅವರ ವಿಷಯವಾಗಿ ಸಾಲದೆಂದೂ ಕಾಣುತ್ತದೆ ಮತ್ತೆ ಬರೆಯುವ ಶಕ್ತಿಯೂ ನನಗಿಲ್ಲ.

ಅವರು ಹಾಸಿಗೆ ಹಿಡಿದ ಮೇಲೆ ಎರಡು ಸಲ ಬೊಂಬಾಯಿಗೆ ಹೋಗಿ ನೋಡಿದ್ದು ನನಗೆ ಎಷ್ಟೋ ಸಮಾಧಾನವಾಗಿದೆ. ಆದರೆ ಅಂತಹವರು ಇನ್ನೂ ಬದುಕಿ ಅನೇಕರಿಗೆ ಆದರ್ಶಪ್ರಾಯವಾಗಿರ ಬಹುದಂತಹ ಲಭ್ಯ ನಮಗಿಲ್ಲ.

ದೇವರು ಅವರ ಆತ್ಮಕ್ಕೆ ಶಾಂತಿಯನ್ನುಂಟು ಮಾಡಲಿ ಮತ್ತು ಅವರು ಪ್ರೀತಿಸಿದಂತಹ ಯೋಚನೆಗಳೆಲ್ಲಾ ಚೆನ್ನಾಗಿ ಮುಂದುವರಿಯಲಿ, ಭಗವಂತನು ಇಡೀ ಕುಟುಂಬಕ್ಕೂ ಬಂಧು, ಬಳಗ, ಸ್ನೇಹಿತರು ಎಲ್ಲರಿಗೂ ಅಪಾರ ದುಃಖವನ್ನು ಕಡೆಯುವ ಶಕ್ತಿವನ್ನುಂಟು ಮಾಡಲಿ. ●



## REMEMBERING USHA JAIRAM

# USHA and AIWC

**— *V. Lakshmi Sharma***

Usha belongs to a family of AIWC members. Her mother, Smt. Bharatibai is a well known Social Worker of All India Women's Conference in Bangalore. Her sister, Sudha Acharya represents AIWC at the United Nations at New York for nearly 30 years. Incidentally All India Women's Conference is the only National Organisation which has an NGO Status at the UN. Her sisters Rekha and Geeta and her daughter Sarita are all Life-members of AIWC. Sarita had taken leave from her office and along with her colleagues took part in the relief work at Dharavi during the 92-93 riots. With three generations of AIWC members in the family, no doubt that Usha has unstinted love and commitment to the organisation. Not only the women in the family but also the man in her life (Mr. Jairam) extended his full co-operation in her work. Not all successful women have such a helping man behind them. He was always ready to help her with his car, his name, his presence at all functions and his skill in drafting, typing etc. whole heartedly.

**"Why should an organisation comprise of poor people only to do social-work? Poor people are weighed down with their own day-to-day problems whereas the elite can devote their minds, money and time for the sake of their less fortunate sisters & brothers"**

When there was criticism about AIWC that it is an elitist organisation, Usha used to vehemently argue that it is not and even if it is, there is nothing wrong in it. "Why should an organisation comprise of poor people only to do social-work? Poor people are weighed down with their own day-to-day problems whereas the elite can devote their minds, money and time for the sake of their less fortunate sisters & brothers" was her logical argument. It is no exaggeration to say that Usha was such a loyal member of AIWC that she ceaselessly thought, spoke and worked for AIWC work. Her telephone was used for AIWC work, her transport was for AIWC work. Even her STD and ISD telephone calls to her mother and sister were used more for an update of AIWC information. Whenever anyone wanted information about AIWC, Usha was ready with it at her fingertips. All the names, telephone numbers, addresses of the members, their portfolios and branches were stored in her super computerised brain. May be malignancy felt jealous of such a brain and since there is no place for it there, it invaded her brain. Usha always opposed the suggestion that in these days of inflation, we should accept atleast our transport expenses from the organisations. She said that it is a donation in kind to the organisation and instead of spending the money on other luxuries like jewellery and entertainment she is spending on social work. She never gave donations in cash saying that she does not want to announce how much she is spending on social work. What a rare Quality!

Usha never posed for a photograph or sat in a chair during any meeting. She was so camera shy that after her demise it became difficult to search for good photograph of hers to be enlarged and kept. She was the life of our annual conferences. She was the leader and organiser right from distribution of delegate forms to members, booking the railway reservations with concessions and organising the whole trips with well chalked out menus for travel. Even though she was pleasure loving she was equally conscientious about the code of conduct for the conferences. She never missed any meeting for the sake of sightseeing. Sometimes she only attended the meetings foregoing sightseeing or shopping. She represented Mumbai branch in various capacities at the centre as executive committee member, standing committee member and as minutes secretary.



*Usha with other workers in the Street Childrens project*

**Usha always opposed the suggestion that in these days of inflation, we should accept atleast our transport expenses from the organisations. She said that it is a donation in kind to the organisation and instead of spending the money on other luxuries like jewellery and entertainment she is spending on social work.**

She was one of the founder members of the Sion-Wadala-Kurla-Chembut Mahila Mandal (AIWC Branch) and worked as secretary for three terms and as President and was incharge of the work centre. She was the secretary for Mumbai Branch for 3 terms, Secretary for Hotel Committee, Vice-Chairman Education Committee. Whatever is the designation her main aim was to work continuously irrespective of the position.

AIWC is unfortunate to lose such a dedicated and self less worker as Usha Jairam. Lastly she look up the street children's project with a lot of zeal but left the children doubly destitute with her loss. Her radiance from far also shall lighten up their lives with hope.



# REMEMBERING USHA JAIRAM

# ನಾಟಕ ರಂಗದಲ್ಲಿ ಉಷಾ

● ಡಾ. ಮಂಜುನಾಥ್

ಹಲ ಮಿಂಚುಗಳು ಹತ್ತಾರು ಬಾರಿ ಮಿಂಚುತ್ತವೆ, ಕೆಲ ಮಿಂಚುಗಳು ಒಂದೇ ಬಾರಿ ಮಿಂಚಿ ಜಗತ್ತನ್ನು ಬೆಳಗಿಸಿ ಹೋಗುತ್ತದೆ. ಮಿಂಚು ಕಣ್ಮರೆಯಾದ ಮೇಲೆ ಅದು ಹೇಗಿತ್ತು ಎಂದು ನೆನೆಯುವುದು ದುಸ್ತರ. ಆದರೆ ಅದರ ಪ್ರಭಾವ ನಮ್ಮ ಮನಸ್ಸಿನ ಮೇಲೆ ಅಚ್ಚಾಗಿ ಬಿಡುತ್ತದೆ. ಉಷಾ ಅಂತಹ ಒಂದು ಮಿಂಚು.



ಬೆಕ್ಕಿನ ಕಣ್ಣು ನಾಟಕದ ಒಂದು ದೃಶ್ಯ

ಉಷಾ ನನಗೆ 1962ರಿಂದ ತಿಳಿದಿದ್ದರೂ ಕೂಡ ಚೆನ್ನಾಗಿ ಪರಿಚಯವಾಗಿದ್ದು 1974ರಲ್ಲಿ. ನಂತರ ನನ್ನೊಡನೆ ಬಹಳಷ್ಟು ನಾಟಕದಲ್ಲಿ ನಟಿಸಿದಷ್ಟೇ ಅಲ್ಲ, ಹಲವಾರು ನಾಟಕಗಳಲ್ಲಿ ನೆರವನ್ನು ನೀಡಿದವರು. ಕಲಾವಿದರಲ್ಲಿ ಹಲವಿಧ. ಕೆಲವರು ಇಷ್ಟಪಟ್ಟು ಮಾಡುವವರು, ಕೆಲವರು ಕೇವಲ ಮುಖ್ಯ ಪಾತ್ರವನ್ನು ಮಾತ್ರ ಮಾಡುವವರು, ಇನ್ನು ಕೆಲವರು ಅದು ಒಂದು ಸಮೂಹ ಚಟುವಟಿಕೆ ಎಂದು ಮಾಡುವವರು. ಇನ್ನು ಕೆಲವರು ನನ್ನ ಬಲವಂತಕ್ಕೆ ಮಾಡುವವರು. ಉಷಾ ನಾಟಕವನ್ನು ಇಷ್ಟಪಟ್ಟು ಮಾಡಿದವರು.

ಅವರು ನನ್ನೊಡನೆ ಮೊದಲು ಮಾಡಿದ ನಾಟಕ `ಬೆಕ್ಕಿನ ಕಣ್ಣು'ಆದರ ಹಿಂದೆಯೇ ಅವರು ವಿ. ಕೆ. ಮೂರ್ತಿ ಹಾಗೂ ಶ್ರೀಮತಿ ಬಲ್ಲಾಳರ ನಾಟಕಗಳಲ್ಲಿ ಮಾಡಿದ್ದುಂಟು. ಹೆಚ್ಚಿನವರಿಗೆ ಹಲವಾರು ಬಾರಿ ತಿದ್ದಬೇಕಾಗುತ್ತದೆ. ಉಷಾ ಹಾಗಲ್ಲ, ಎರಡು ಬಾರಿ ತೋರಿದರೆ ಮಾಡಿ, `ಸರಿಯಾಗಿತ್ತಾ ಡಾಕ್ಟ್ರೇ?' ಅನ್ನುವವರು ಅಷ್ಟೇಲ್ಲಾ ! ಮನೆಯಲ್ಲಿ ರಿಹರ್ಸಲ್ ಮಾಡಿಕೊಂಡು ಬರುವಂತಹ ಅಪರೂಪದ ವ್ಯಕ್ತಿ.



ಗೀತಾ ವಿಶ್ವನಾಥರವರ 'ಕೂಪ ಮಂಡೂಕ' ನಾಟಕದಲ್ಲಿ

ದಿಗ್ದರ್ಶನ ಬರೀ ರೇಜಿಗೆಯ ಕೆಲಸ, ನಿರ್ದೇಶಕರು ಇಪ್ಪತ್ತು ಬಾರಿ ಮಾಡಿ ತೋರಿದರೆ ಒಂದು ಬಾರಿಯೂ ಪ್ರಯತ್ನ ಮಾಡದಿರುವ ಕಲಾವಿದರಿಗೆ ಪ್ರತಿಯಾಗಿ, ಈಕೆ ತನ್ನೆಲ್ಲಾ ಚಟುವಟಿಕೆಯ ಮಧ್ಯದಲ್ಲಿ ಈ ನಾಟಕಕ್ಕೂ ಸಮಯ ಕೊಡುತ್ತಿದ್ದುದು ನನಗೆ ಅನುದಿನದ ಅಚ್ಚರಿ. `ಬೆಕ್ಕಿನ ಕಣ್ಣು', `ರಂಗೋಲಿ ನ್ಯಾಯ', `ಬಿಸಿಲ್ಗುದುರೆ', `ಬೆಳ್ಳಿಬೈಲು', `ಬೋನು'ನಾಟಕಗಳು ಕೆಲವು. ಯಾವ ಚಿಕ್ಕ

> ಯಾವ ಚಿಕ್ಕ ಪಾತ್ರವಾದರೂ ಸರಿಯೇ ಮಾಡುವುದಕ್ಕೆ ಉಷಾ ಸದಾ ಸಿದ್ಧ. ಮಳೆಯಿರಲಿ, ಬಿಸಿಲಿರಲಿ ಅಥವಾ ಜ್ವರವೇ ಇರಲಿ, ಉಷಾ ರಿಹರ್ಸಲ್ ತಪ್ಪಿಸಿದ್ದು ಯಾವತ್ತೂ ಇಲ್ಲ.

ಪಾತ್ರವಾದರೂ ಸರಿಯೇ ಮಾಡುವುದಕ್ಕೆ ಉಷಾ ಸದಾ ಸಿದ್ಧ. ಮಳೆಯಿರಲಿ, ಬಿಸಿಲಿರಲಿ ಅಥವಾ ಜ್ವರವೇ ಇರಲಿ, ಉಷಾ ರಿಹರ್ಸಲ್ ತಪ್ಪಿಸಿದ್ದು ಯಾವತ್ತೂ ಇಲ್ಲ. ಅವರಿಗೆ ಅಡಚಣೆ ಕೊಡುತ್ತಿದ್ದುದು ಒಂದೇ ಒಂದು ಅಭ್ಯಾಸ, ಸೆರಗನ್ನು ಯಾವಾಗಲೂ ಗುಬುರು ಹಾಕಿ ಹೊದಿದುಕೊಳ್ಳುವುದು. `ಉಷಾ' ಅಂತ ನಾನು ಕೂಗೋಕೆ "ಇಲ್ಲಿ ಬಿಡಿ ಡಾಕ್ಟ್ರೇ' ಅವರು ಮರು ನಗು ಕೊಡೋಕೆ ಸರಿಯಾಗ್ತಿತ್ತು.

ಶ್ರೀಪತಿ ಬಲ್ಲಾಳರು ರಿಹರ್ಸಲ್ ಸರಿಯಾಗಿ ಮಾಡಿಕೊಂಡು ಬಾರದೇ ಇದ್ದರೆ ಬೇಸರ ಮಾಡ್ತರೇಂತ, "ಡಾಕ್ಟರೇ, ಸ್ವಲ್ಪ ನನಗೆ ಹೆಲ್ಪ್ ಮಾಡ್ಬೇಕಲ್ಲ, ಇವೊತ್ತು ಸ್ವಲ್ಪ ನನ್ನ ಮೂವ್‌ಮೆಂಟ್ಸ್ ನೋಡಿಬಿಡಿ, ಅಲ್ಲಿ ಕಿರೋರಿ ಅವರೆಲ್ಲಾ ತಯಾರಾಗಿ



ಬೋನು ನಾಟಕದ ಒಂದು ದೃಶ್ಯ

ಬಂದಿದ್ದಾರೆ, ನಾನೊಬ್ಬಳು ಐಬಾದ್ರೆ ಕಷ್ಟ" ಅಂತ ಮಧ್ಯಾಹ್ನ ಮಂಡಲಿಯಿಂದ ಬಂದ ಮೇಲೆ, ಜುಹು ಹಾಸ್ಟೆಲ್ಲಿಗೆ ಹೋಗೋ ದರ ನಡುವೆ ರಿಹರ್ಸಲ್! ಕಲಾವಿದರು ಅಂದರೆ ನಾಟಕದಲ್ಲಿ ನಟನೆ ಮಾಡುವವರು ಮಾತ್ರ ಅಂತ ಬಹಳ ಮಂದಿಯ ಅಭಿಪ್ರಾಯ. ಖಂಡಿತ ಅಲ್ಲ, ನಾಟಕದಲ್ಲಿ ಹಲವಾರು ಅಂಗಗಳಿವೆ. ಮೊದಲು ನಾಟಕ ರಚನೆ, ವಿಮರ್ಶೆ, ಪಾತ್ರಗಳ ಆಯ್ಕೆ, ರಂಗವಿನ್ಯಾಸ, ಬೆಳಕಿನ ವಿನ್ಯಾಸ, ಮೇಕ್‌ಅಪ್, ಸಂಗೀತ, ಮೈಸೂರು ಅಸೋಸಿಯೇಶನ್‌ನ ನಾಟಕಗಳೆಲ್ಲೆಲ್ಲಾ, ಈ ಎಲ್ಲಾ ಅಂಗಗಳಲ್ಲಿಯೂ ಉಷಾ ಭಾಗವಹಿಸುತ್ತಿದ್ದುದು ಸರ್ವೇಸಾಮಾನ್ಯ. ಆದರೆ ಅವರ ಹೆಸರು ಕೆಲವೇ ಸಲ ಮುಂದೆ ಬಂದಿದೆ. 'ಅಯ್ಯೋ ಅದು ನನಗೆ ಇಷ್ಟವಾಗೊಲ್ಲಪ್ಪ, ನಾನು ಮಾಡೊಲ್ಲ' ಅಂತ ಯಾವತ್ತೂ ಅನ್ನಲಿಲ್ಲ. ಆದರ ಬದಲು, ಇನ್ನು ಯಾವಾಗಲೋ, ಮೆಲ್ಲಗೆ 'ಡಾಕ್ಟರೇ, ಇದನ್ನ ಸ್ವಲ್ಪ ಬೇರೆ ತರಹ ಮಾಡಿದರೆ ಚೆನ್ನಾಗಿರುತ್ತೆ ಅಲ್ವಾ' ಅನ್ನೋದು ಅವರ ವಿಧಾನ. ನಾಟಕ ಮಾಡುವಾಗ ಅದು ಕೇವಲ ನಾಟಕವಲ್ಲದೆ, ಒಂದು ಕುಟುಂಬದ ಒಂದು ಒಟ್ಟಾರೆ ಚಟುವಟಿಕೆ ಅನ್ನೋದು ಅವರ ಭಾವನೆ. ನಾಟಕ ಮುಗಿದ ಮೇಲೆ ಎಲ್ಲಾರನ್ನೂ ಅವರ ಮನೆಗೆ ಸುರಕ್ಷಿತವಾಗಿ ಮುಟ್ಟಿಸ್ಬೇಕು, ರಿಹರ್ಸಲ್‌ನಲ್ಲಿ ಎಲ್ಲಾ ಕಲಾವಿದರ ಊಟ ತಿಂಡಿ ಚೆನ್ನಾಗಿ ನೋಡಿಕೋಬೇಕು, ಅನ್ನೋದು ಕೇವಲ ನಟನೆ ಮಾಡುವ ನಟನಿಗೆ ಬರೋದಿಲ್ಲ, ತುಂಬಿದ ಕಲಾವಿದರಿಗೆ ಮಾತ್ರ ಬರುತ್ತೆ.

ನಟನೆಯಲ್ಲಿ ಅವರು ಮಡಿದ್ದು, 'ಬೆಕ್ಕಿನ ಕಣ್ಣು' ಒಂದು ಬಿಟ್ಟರೆ ಎಲ್ಲಾ ಮೃದು ಪಾತ್ರಗಳೇ. ಅದು ಅವರಿಗೆ ಸಹಜವಾಗಿ ಬರ್ತಿದ್ದಿದ್ದು. ಬೆಕ್ಕಿನ ಕಣ್ಣಿನಲ್ಲಿ ಹುಚ್ಚಾಸ್ಪತ್ರೆಯಲ್ಲಿರುವ ಮೇಡಮ್ಮನ ಪಾತ್ರದಲ್ಲಿ ಅವರ ಅಭಿನಯ ಗಮನಾರ್ಹವಾದುದು. ಅಂತೆಯೇ 'ಬೋನು' ನಾಟಕದಲ್ಲಿ ಅವರ ಸ್ವಭಾವಕ್ಕೆ ಸಹಜವಲ್ಲದ ಪಾತ್ರ ಭಾರತೀಬಾಯಿಯದ್ದು.

ನಾಟಕದಲ್ಲಿ ನಾನು ಉಷಾನ ನಿರ್ದೇಶನ ಮಾಡಿದ್ರೆ, ನಿಜ ಜೀವನದಲ್ಲಿ ಉಷಾ ಹಲವಾರು ಬಾರಿ ನನ್ನನ್ನು ನಿರ್ದೇಶಿಸಿದ್ದಾರೆ. ಹಲವಾರು ಬಾರಿ ತಿದ್ದಿದ್ದಾರೆ.

'ನಾ ದ್ಯಾವರನ್ನ ನೋಡಬ್ಯಾಕು' ನಲ್ಲಿ ಅವರ ರಚನೆಯ ಹಾಡೊಂದಿದೆ. ಅದಕ್ಕೆ ಅವರೇ ಸಂಗೀತಕೊಟ್ಟಿದ್ದು. 'ಬೆಂದಕಾಳೂರು'ನಲ್ಲಿ ಅವರು ರಚಿಸಿದ ಮತ್ತೊಂದು ಹಾಡಿದೆ. ಎಷ್ಟೋ ಬಾರಿ ಅವರೇ ಟೇಪ್ ಮೇಲೆ ಕೂತಿದ್ದು ಉಂಟು. ಅಂತೆಯೇ ವೇಷಭೂಷಣದ ಎಲ್ಲಾ ಹೊಣೆಯು ಸುಮಿತ್ರಾ ಚಂಪಕನಾಥ್ ಜೊತೆ ಅವರದ್ದೇ.

ಜೀವನವೇ ಒಂದು ಕ್ಷಣದ ನಾಟಕ. ನಾಟಕದಲ್ಲಿ ನಾನು ಉಷಾನ ನಿರ್ದೇಶನ ಮಾಡಿದ್ರೆ, ನಿಜ ಜೀವನದಲ್ಲಿ ಉಷಾ ಹಲವಾರು ಬಾರಿ ನನ್ನನ್ನು ನಿರ್ದೇಶಿಸಿದ್ದಾರೆ. ಹಲವಾರು ಬಾರಿ ತಿದ್ದಿದ್ದಾರೆ. ನಾನು ಅವರ ಜೊತೆ ನಿಕಟವಾಗಿ ೨೫ ವರ್ಷ ೨೫ ಕ್ಷಣಗಳ ಹಾಗೆ ಈಗ ಅನ್ನಿಸ್ತಿದೆ. ಪ್ರತಿ ನಾಟಕ ಮಾಡೋಕೆ ಮುಂಚೆ ಅವರ ಜೊತೆ ಚರ್ಚೆ ಇರುತ್ತಿತ್ತು. ಈಗೊಂದು ನಾಟಕ ಮಾಡೋಕೆ ಹೊರಟಿದೀನಿ. ಆದರೆ ಈ ನಾಟಕಕ್ಕೆ ಉಷಾ ಜೊತೆ ಚರ್ಚೆ ಇಲ್ಲ. ಈಗ ನಾಟಕ ಅನ್ನಿಸೋಕೆ ಹತ್ತಿದೆ.



ಬೋನು ನಾಟಕದಲ್ಲಿ ಉಷಾ



## REMEMBERING USHA JAIRAM

# USHA - AN ORGANISER BEYOND COMPARE

In 1966 Kannada Vanita Samaj (KVS) started with 5 Kanndigas at RBI quarters, Bombay Central. In the beginning only bhajans were conducted.The membership increased and Usha Jairam joined KVS. She had the idea that good progammes should be offered for ladies apart from the bhajans, so that Ladies should do some useful work for the society in their spare time. The idea was very novel but space was the biggest criteria to conduct any programme. At that time even, to acquire any property in Bombay was a herculean task with no funds on hand. With Usha's determination and bold step the idea of raising funds for the project emerged. In 1968, a small benefit programme at Blind school hall - Worli was arranged. With full enthusiasm Usha did the Lions share of work. From the printing and selling of tickets, collecting advts. for souvenirs organising the programmes. In every aspect she helped us immensely. We could muster some funds but not enough for even a small flat in Bombay. Again in 1971 a mega prog of Kishore kumar nite was arranged at Shanmukanand Hall. The prog. was booked in the biggest hall of Bombay and prog. by film star member a real up hill task. The committee was skeptical about the successful collection of funds, since the expenditure was very high. But Usha just plunged into the project deeply and made it a grand success. She had to her credit maximum No. of tickets and advts. for the Souvenirs. Sri Jairam was always behind her success and he too was co-operative with all our projects. He took charge of printing and proof reading etc. Most probably he must have missed the programme sitting at the press and dispatching souvenirs to the hall. Unmindful of their personal problems, health etc. both worked hard and made it a grand success. She was always modest in spite of doing the bulk of work. With her perseverance and hardwork KVS was able to purchase a flat opp. Century Bazar, Worli. In the heart of a city like Bombay a place to acquire is really creditable and credits go to Usha. She was a great organiser and used to take great pains in going through minute details and present to the audience very effectively. Her contribution to KVS in beyond words and thanks to her effort KVS is celebrated the silver jubilee year also on a grand scale with progs. exhibition etc throughout that year.

**She was a great organiser and used to take great pains in going through minute details and present to the audience very effectively.**

She was the backbone of any organisation. She never cared for name or fame. She has sacrificed her whole life to help others. She used to enjoy helping poor, needy and sick people. Unmindful any comments she used to darshfor ward with her seva mano bhava.

She was a great apprecia-tor of arts in any form. She was a born actress and good orator. She used to enjoy any good cultural prog. and would not miss any them. She had deep knowledge of music and was a good critic also.



*Usha with the other KVS Members.*

With all these activities she never neglected the home. She looked after her aged mother in law with special care and kept her comfortable till the end. On my personal side she was helpful when I was sick. I can never forget the incident. Once I was down with virus fever and my a children were very young. Immediately Usha offered to send me some hot, fresh cooked food, specially cooked by herself. She sent them regularly till I became alright. Many times she herself would deliver the food personally. She was a tower of strength to me. Both our families were knit together and worked as one. Any time, any crisis at any place she was there to solve them. We were lucky enough to be associated with her at least for 30 years. Her greatness is still unimaginable and cannot be expressed by pen. I had never seen her once losing temper and hurting anyone. She was always humble in all her approaches.

**She was the backbone of any organisation. She never cared for name or fame. She has sacrificed her whole life to help others.**

I shifted to Madras and it was realy unfortunate that I could not meet her, during her last days. But I cherish her greateness alway in my memories. We have really lost a noble Jewel.

May her soul rest in peace. We pray God to give enough strength to her family to bear their huge loss.

— **Vimala Narayana Rao**
(Ex-Treasurer, Vice President KVS Now settled in Madras)



# REMEMBERING USHA JAIRAM

## SHRADDHA

*— Bhavani*

Smt. Usha Jairam's involvement with the downtrodden masses, specially women and children, found another outlet in the Street Children's project undertaken by the A.I.W.C., Bombay Branch in response to the appeal of S.O.S., Pune. Usha was one of the team of committed ladies of A.I.W.C. who grabbed this offer from S.O.S., Children Village to start a project for street children. The team consists of Smt. Vijayalakshmi Pandit, Tara Shah, Kastur Manjrekar, Meera Kulkarni, Pramila Kulkarni, Nivedita Sheth, Neela Vaidya and many more. Usha used to always mention it to Kasturtai Manjrekar

**It was her enthusiasm and involvement that saw the beginning of this project on 2nd October, 1996 at Khar Railway station on Platform No. 5 & 6.**

(with whom she would return home after the meeting at S.W.K.C. Mahila Mandal at King Circle) that they should be doing



*Class Room on platform*

something to improve the lot of these children whom we see along the foot paths and railway station whiling away their time in ungainful and often destructive activities. So, when the opportunity came knocking at the doors, she whole heartedly welcomed it. It was her enthusiasm and involvement that saw the beginning of this project on 2nd October, 1996 at Khar Railway station on Platform No. 5 & 6.

**Today, there are some fifty children enjoying the fruits of the effort put in by Usha and other committed members.**

She contacted Srinivas Sawant, a trained professional social worker whom she had known through other projects and sought his active support for this project. They, along with Usha's daughter Sarita, talked to a few children around Santacruz and Khar and got them to come to their 'School' (as they would call it) at the Khar station. Thus SHRADDHA was born. This small beginning has today grown into a full-fledged centre with its own office in Hasinabad lane Municipal School in Khar.

Srinivas was instrumental in finding right candidates for a full time trained social worker and a trained teacher to spend the whole day with these children in order to make them learn the few basic things in life which they had missed until then. Sri Pravin Damle and Miss Archana Kadam transformed these children from ruthless, fighting, unclean urchins into caring and loving boys and girls who washed and cleaned themselves daily and presented themselves smartly everyday for the classes at 10.30 a.m.

The organis- ers had a lot of problems initially as they had no place and had to virtually be on roads more often than not, till they found this room in Haṣinabad Municipal School. Usha was great pillar of support and moral courage to these enthusiastic staff at all times of their hardships. She would personally go and sit with them talking to the children on the roads, encouraging them not to lose heart. Her house was their office when they had no place to go. She scouted the area along with Pravin to find a place for the centre. Then, with the help of Mr. Prabhakar Vaidya, managed to convince the authorities of the Municipal School an Hasinabad lane at Khar, to let out a room for their activities. Finally they moved here in March, 1997.

**It was this love and affection showered on them by Usha, Sarita, Pravin and Archana that won them over to come to school and listen to what Sir (Pravin), Didi (Archana) and Badididi (Usha) had to say and teach.**

These children get their meals, and clothes through the funds of S.O.S. Also the staff get their salaries from S.O.S. The A.I.W.C. caters to the other general needs. The Rotary Inner Wheel Club has also now pitched in. Thus funds have not been a problem so far. But what is required most is the whole hearted commitment to see the project through. Anyone who has the slightest inkling to the life led by these street children, knows that they are deprived of basic necessities in life and they grow up with no scruples, no morals and no values. To inculcate in them a disciplinary life is no mean job. They generally do not respect any one and tend to look at everybody with suspicion and distrust. To win their confidence is the first step if you have to make them listen to you. This can only be achieved, if you make them feel loved and cared for without admonishing them or being judgmental. It was this love and affection

*(Contd. Pg. 16)*



# REMEMBERING USHA JAIRAM

# ಉಷಾರವರ ಕೆಲವು ರಚನೆಗಳು

## ಇವರೂ ನಮ್ಮವರೇ

ಹೇನು ಬಿದ್ದ ತಲೆಯ ಹೊತ್ತು
ಬೇನೆಯಿಂದ ಬಳಲಿ ಬಸಿದು
ಮೊಂಡ ಕೈಯ್ಯ ಮುಂದೆ ಮಾಡಿ
ಕಂಡ ಕಂಡ ಭಂಡರನ್ನು
ಬೇಡಿ ಬೇಡಿ ಬೇಸತ್ತಿರುವ
ಇವರೂ... ನಮ್ಮವರೇ
ಭಾರತದವರೇ
ತುಂಡು ಬಟ್ಟೆ ಉಟ್ಟ ಹೆಣ್ಣು
ಹೊಟ್ಟೆಗಾಗಿ ಮೈಯ್ಯ ತೆತ್ತು
ಕೆಟ್ಟ ಕೆಟ್ಟ ಗಲ್ಲಿಯಲ್ಲಿ
ಗುಟ್ಟು ಗುಟ್ಟಿನಲ್ಲೆ ಹೆತ್ತು
ಕೊಡಲಾಗದೆ ಅದಕೆ ತುತ್ತು
ಬಿಟ್ಟಿಪ ಓಡಿ ಹೋಗುತ್ತಿರುವ
ಇವರೂ..... ನಮ್ಮವರೇ
ಭಾರತದವರೇ
ಕೇರಿ ಕೇರಿ ಅಲೆಯುತಿರುವ
ಮಾರುದ್ದದ ಪೋರರು
ಕಳ್ಳ ಜನರ ಚಾಕರರು
ನಾಳೆಯನ್ನು ಕಾಣದವರು
ಓದುಗೀದು ಇಲ್ಲದೆಯೇ
ಬೂದಿಯಾಗುವ ಕಂದಮ್ಮಗಳು
ಇವರೂ....... ನಮ್ಮವರೇ
ಭಾರತದವರೇ....

## ಪುಟ್ಟ ಪೋರಿ

ಪುಟ್ಟ ಪೋರಿ, ದಿಟ್ಟ ಹೆಣ್ಣು
ನಿಟ್ಟುಸಿರ ಬಿಟ್ಟಾಳೋ ।
ಬಣ್ಣ ಬಣ್ಣ ಕನಸ ಕಂಡು
ಮನಸು ಮೆಲಕ ಹಾಕ್ಯಾದೊ ।
ಚಂದಿರನ ಮಂದ ಬೆಳಕು
ಸಿಂದಿರೆಯ ತಾರದೋ ॥ಪುಟ್ಟಪೋರಿ॥
ಪ್ರಾಯದಕ್ಕಿ ಗರಿಯಬಿಚ್ಚಿ
ಕಾತರದಿ ಕಾದದೋ
ಕಣ್ಣ ತುಂಬಕೊಂಡಿ ಹರಿದು
ಕೆರೆಯ ಹಾದಿ ಹಿಡಿದಂದೋ ॥ ಪುಟ್ಟಪೋರಿ ॥

## ಹರೆಯ

ಮೆಲುಕು ಹಾಕುತ್ತಿತ್ತು ಮನ ಮೆಲುಕು ಹಾಕುತ್ತಿತ್ತು
ಕಣ್ಣ ಒಳಗೆ ಕಣ್ಣ ನೆಟ್ಟು
ಮೋಡಿ ಮೂಡಿದಂತ ಚಣವ ॥ ಮೆಲುಕು ॥
ಕಪ್ಪು ಮೈಯ್ಯ ಪುನಗುನಾತ
ಕಸ್ತೂರಿಯಂತೆ ಘಮ್ಮಗಿತ್ತು
ಓರೆ ಕೋರೆ ರೂಪವೆಲ್ಲ
ನೇರ ಎರ ಕಾಣುತಿತ್ತು
ದೂರ ದೂರ ಕನಸ ಹಾಡಿ
ಹಿಡಿದು ತನ್ನ ಇರವ ಮರೆತು ॥ ಮೆಲುಕು ॥
ಮುಗ್ಧ ಮನದ ಮುದ್ದು ಬಾಲೆ
ಅರಿವಳೆಂತು ಅವನ ಲೀಲೆ
ಹಚ್ಚ ಹರೆಯ ಭ್ರಮೆಯು ಸರಿದು
ನನಸಾಗದ ಕನಸ ಜರಿದು
ಪುಟ್ಟ ಹೃದಯ ಬಾಡಿದಂತೆ
ಮರುಗುವುದು ನನ್ನ ಮನ ಮರುಗುವುದು
॥ ಮೆಲುಕು ॥

## ಅರಿವು

ತನು ಮನ ಜನ ನನ್ನಂತೆ ನಡೆದಾಗ
ಏನೊಂದು ನಲಿವಿತ್ತು ಏನೊಂದು ಒಲವಿತ್ತು
ತನುಬಾಡಿ, ಮನಮುದುಡಿ, ಜನಸೂರ ಸರಿದಾಗ
ಇದು ನಲಿವೆ ? ಇದು ಒಲವೆ?
ಈ ಪ್ರಶ್ನೆ ಮುಂದಿತ್ತು.
ಬಾಳ ಹಸಿರಲಿ ನಡೆದ ಆಟಗಳೆಷ್ಟೋ
ಸಿಕ್ಕ ಮಾನಸನ್ಮಾನಗಳೆನ್ನೆಷ್ಟೋ
ರಸವಿಲ್ಲಾದಾ ನಾರ ಎಸೆದ ಮೇಲೆ
ಮನಕಾದ ಗಾಯಗಳೆಷ್ಟೆಷ್ಟೋ
ಅರಿವಾಗುತಿದೆ ನನಗೆ ಇದುವೆ ಮುಪ್ಪು
ಅನಂತವಾಗದ್ದು ಹಸಿರು - ಅದು ನನಗೆ ಗೊತ್ತು

## ಬೇಡಿಕೆ

ನನ್ನ ಹೆಸರು ಕೋಸಂಬರಿ. ಸುಂದರಿ, ನೀಲಾಂಬರಿ, ಕನಕಾಂಬರಿ, ಮಂಡೋದರಿ, ಗಾಂಧಾರಿ ಅಂದಹಾಗೇ ಇದೆ ನನ್ನ ಹೆಸರೂನೂ.

ಚೆನ್ನಾಗಿ ಮಿಂದು, ಮಿರ ಮಿರ ಮಿರುಗುತ್ತಾ ಮರೆದಾಡುತ್ತೇನೆಂದೂ ಮೆಚ್ಚುತ್ತಾರೆ ನೋಡಿದವರು. ಘಮಿಘಮಿಸುತ್ತಾ ನನ್ನದೇ ಆದ ಪ್ರತ್ಯೇಕ ಪರಿಮಳವನ್ನು ಬೀರುವ ನನ್ನ ಸವಿ ಬಲ್ಲವರಿಗೇ ಗೊತ್ತು. ಮತ್ತೆ ಹಸಿಯಾಗಿ ಹೊಟ್ಟೆಗೆ ಹೋಗುವುದು ಚೆನ್ನಾಗೇ ಆಗಿಯಬೇಕು, ಇದು ಬಿಸಿ ತರಕಾರಿಯ ಕಿಚ್ಚು ಮಾತು. ಹಬ್ಬದ ದಿನಗಳೆಲ್ಲಾ ನನ್ನಿಂದಲೇ ಆರಂಭ. ನಾನಿಲ್ಲದೆ ಮದುವೆ ಮುಂಜಿಗಳೇ ಇಲ್ಲಾ. ಊಟದ ಎಲೆಯಲ್ಲಿ ನನಗೆ ಭಕ್ಷ್ಯಕ್ಕಿಂತಲೂ ಅಗ್ರಸ್ಥಾನ. ಹಬ್ಬನೆಯ ಎಲೆಯಲ್ಲಿ ಮೊದಲ ಪಂಕ್ತಿಯಲ್ಲೇ ನನ್ನ ಪೀಠ. ಆರತಿ ಅಕ್ಷತೆಗಳಲ್ಲೆಲ್ಲಾ ದೊನ್ನೆಗಳಲ್ಲಿ ಮೆರೆದಾಡುವೆ. ರಾಮನವಮಿಯಲ್ಲಿ ಪ್ರಸಾದವಾಗಿ ಭಕ್ತಿಯಿಂದ ನಮಿಸುವೆ. ಪಾರ್ಟಿಗಳಲ್ಲಿ ವಿಧ ವಿಧ ಅಲಂಕಾರಗಳಿಂದ ಶೋಭಿಸುವೆ. ಇಂದಿನ ಬೆಡಗಿನ ಪ್ರಪಂಚದಲ್ಲಿ ನನ್ನದೇ ಶ್ರೇಷ್ಠ ಸ್ಥಾನ ದೊರಕಿದೆ. ಎಲ್ಲಾ beauty Queenಗಳು, ಸಿನಿಮಾ ತಾರೆಯರು ಎರಡೂ ಕೈ ಚಾಚಿ ನನ್ನ ಸ್ವಾಗತಿಸುತ್ತಾರೆ. ಕೆಲವು ರೋಗಿಗಳಿಗೂ ನಾನು ಉಪಕಾರಿಯಾಗಿದ್ದೇನೆ. ಎಲ್ಲಾ ರೀತಿಯಲ್ಲಿಯೂ ಮುಂದುವರೆದ ಉಪಕಾರಿಯಾದ ನನ್ನ ಹೆಸರನ್ನು ತಾವು ವಿನಾ ಕಾರಣ ಅವರಿವರಿಗೆ ಹೋಲಿಸಿ ಬೈಯುವುದು ಖಂಡಿತ ನನಗೆ ದುಃಖವನ್ನುಂಟು ಮಾಡಿದೆ. ದಯವಿಟ್ಟು ಏನೂ ಅರಿಯದ ದಡ್ಡ ಹೆಂಗಸರಿಗೂ ಕೋಸಂಬರಿ ಬಳಗ ಎಂದು ಕಾಕರಿ ಬೀಕರಿ ನೆಂಟರಿಗೂ ಕೋಸಂಬರಿ ಮುತ್ತೈದೆ ಎಂದು, ಥೂ ಕೋಸಂಬರಿ ಎಂದು ಹೇಳುವುದನ್ನು ನಿಲ್ಲಿಸಿ. ನಮ್ಮ ಕನ್ನಡ ವನಿತಾ ಸಮಾಜದವರು ಸಭೇ ಸೇರಿ ಒಂದು ತೀರ್ಮಾನಕ್ಕೆ ಬಂದು ನೊಂದ ನನ್ನ ಮನಸ್ಸಿಗೆ ಆನಂದ ತರುವಿರೆಂದು ನೆನೆಸಿದ್ದೇನೆ. ಇದೇ ನನ್ನ ಅರಿಕೆ, ಕೋರಿಕೆ.



# REMEMBERING USHA JAIRAM

# TRIBUTE IN VERSES

## ಉಷಾ ಮನೆ

ಮುಂಬೈಗೆ ಬರುವವರಿಗೆ ಉಷಾಮನೆ
ಮುಂಬೈಯ್ಯಲ್ಲಿರುವವರಿಗೆ ಉಷಾ ಮನೆ
ಪ್ಲೇನ್ ಮಿಸ್ ಮಾಡಿದ ಅಮೆರಿಕಾದವರಿಗೆ
ಉಷಾ ಮನೆ
ಮನ್ಸೂನ್ ಹೊಡೆತಕ್ಕೆ ಟ್ರೇನ್ ಬಂದಾದಾಗ
ಉಷಾ ಮನೆ
ಮಡಿಮಡಿ ಅಜ್ಜಿಗೆ ಸುಖದಲಿ ತಂಗಲು ಉಷಾ ಮನೆ
ಪ್ಯಾರಿಸ್ ಪ್ರವಾಸಿಗೆ ಅರಾಮಾಗಿ ಮಲಗಲು
ಉಷಾ ಮನೆ
ಕವಿತೆ ಕಟ್ಟಲು ಐಸ್‌ಕ್ರೀಮ ಸವಿಯಲು
ಬೇಂದ್ರೆಯ ಹಾಡಲು ಉಷಾಮನೆ
ಚರ್ಚೆ ಮಾಡಲು ಹೆಣ್ಣುಗಂಡು ನೋಡಲು
ಹೋಲಿ ಆಡಲು ಉಷಾ ಮನೆ
ಯಾರಿಗೆ ಮುಂಜಿ ಯಾರಿಗೆ ಮದುವೆ
ಯಾರಿಗೆ ಪ್ರಮೋಶನ್ ಯಾವ ಸೆಲೆಬ್ರೇಶನ್
ಭರ್ಜರಿ ಊಟಕ್ಕೆ ಅಸೋಸಿಯೇಶನ್ ಕೂಟಕ್ಕೆ
ಉಷಾಮನೆ
ಯಾರಿಗೆ ಕಾಯಿಲೆ ಯಾರಿಗೆ ದಣಿವು
ಆಸ್ಪತ್ರೆ ಓಡಾಟ ವೀಸಾಗೆ ಪರದಾಟ
ಯೋಚನೆ ಇಲ್ಲ ಇರುವುದು ಇಲ್ಲೇ ಉಷಾಮನೆ
ನೊಂದ ಹುಡುಗಿಗೆ ನೆಮ್ಮದಿ ತೋರಲು
ಉಷಾ ಮನೆ
ಬೀದಿ ಪೋರರಿಗಕ್ಷರ ಕಲಿಸಲು ಉಷಾ ಮನೆ
ಜಗಳ ಸಾವು ಕೋಮಿನ ಕಾವು ಆರಿಸಲಿರುವುದು
ಉಷಾ ಮನೆ
ಒಲವಿಗೆ ನಲಿವಿಗೆ ಬೆಚ್ಚನೆ ಆಸರೆಗೆ ಎಂದೆಂದೂ
ಬಾಗಿಲು ತೆರೆದಿಹ ಉಷಾಮನೆ
ಮುಂಬೈ ಎಂದರೆ ನಮಗೆಲ್ಲಾ
ನಮ್ಮ ಉಷಾ ಮನೆ
ಎಂದೆಂದಿಗೂ ಇರಲಿ ನಮ್ಮೆಲ್ಲರೆದೆಯಲಿ
ಒಂದು ಉಷಾ ಮನೆ.

— ಉಮಾ ರಾವ್

## ಉಷೆಗೆ ಬಾಷ್ಪಾಂಜಲಿ

ಸರಳಾಂತರಂಗದ
ನೀ ವಿರಳ ಮೂರ್ತಿ
ಬಯಸಿಲ್ಲ ಎಂದೂ
ಹೆಗ್ಗಳಿಕೆ, ಕೀರ್ತಿ
ಮಹಿಳೆಯರ ಹಿತಕಾಗಿ
ನಿಶಿದಿನವೂ ದುಡಿದೆ
ಸಕಲರಿಗೆ ಸಹಕಾರ
ಬೆಂಬಲವನೆರೆದೆ.
ಜನಸೇವೆ ಬಾಳಗುರಿ
ಎಂದೆನುತ ಸವೆವೆ
ಜನಮನದಿ ಚಿರಕಾಲ
ಮನೆ ಮಾಡಿ ನಿಂದೆ.
ಎಲ್ಲರಿಗೂ ಬೇಕಾಗಿ
ಸರ್ವರೊಳು ಬೆರೆತೆ
ಬಲ್ಲಿದರ ಉಸಿರಾಗಿ
ಸ್ವಾರ್ಥವನೆ ಮರೆತೆ
ಕಾವ್ಯವನು ರಚಿಸಿದ್ದೆ
ರಂಗವನು ಬೆಳಗಿದ್ದೆ
ವೇದಿಕೆಯ ಹಿಂದಿದ್ದು
ಘನತೆಯನು ಮೆರೆದೆ.
ಹಲವಾರು ಸಂಸ್ಥೆಗಳ
ಕೈದೀವಿಗೆಯಾಗಿದ್ದೆ
ಹೆರವರಿಗೆ ಬೇಕಾದೆ
ನೀ ಮಾತ್ರ ಸೊರಗಿದ್ದೆ.
ಕಬ್ಬಿನೊಲು ಸವಿ ಮಾತ್ರ
ಎಲ್ಲರಿಗೂ ಹಂಚಿದ್ದೆ
ಬೇನೆಯಲು ನಗುತಿರುವ
ಸಹನೆಯನು ತೋರಿದ್ದೆ.
ಉಷೆ ನಿನ್ನ ನೆನೆನೆನೆದು
ಬಾಷ್ಪಾಂಜಲಿ ನೀಡುತಿಹೆ
ನೇಸರಿನ ಹಾಳೆಯಲಿ
ಕಾವ್ಯದಲಿ ಮೂಡಿಸಿಹೆ

— ಡಾ. ಸುನೀತಿ ಉದ್ಯಾವರ್.

## ನನ್ನ ಸಹಗಾರ್ತಿ ಉಷಾ

೨೫ ವರುಷಗಳ ಹಿಂದೆ ಕನ್ನಡ ವನಿತಾ ಸಮಾಜದ ಹೊಸ ಕಟ್ಟಡದಲ್ಲಿ ಶ್ರೀ ಸತ್ಯನಾರಾಯಣ ಪೂಜೆ ನಡೆದಾಗ, ಕನ್ನಡ ಜನರ ಸಂಪರ್ಕಕ್ಕೆ ಹಾತೊರೆದು ಸಮಾಜದಲ್ಲಿ ಕಾಲಿಟ್ಟೆ. ಬಾಗಿಲಲ್ಲಿ ಪ್ರೀತಿಯಿಂದ ಒಳಕರೆದು ಶ್ರೀಮತಿ ಜಯಾರಾವ್ ನನ್ನನ್ನು ಉಷಾಗೆ ಪರಿಚಯ ಮಾಡಿಸಿದರು. ಅಂದಿನಿಂದ ಅವ್ಯಾಹತ ವಾಗಿ ಬೆಳೆದ ಈ ಸ್ನೇಹ ದಿನದಿನಕ್ಕೂ ಹೆಚ್ಚುತ್ತ ಹೋಗಿ ಬೇರೆ ಬೇರೆ ಸಂಸ್ಥೆ ಸಂಘಗಳಲ್ಲಿ ಜೊತೆ ಜೊತೆಯಾಗಿ ಕೆಲಸ ಮಾಡಿ ಮತ್ತಷ್ಟು ಭದ್ರವಾಯಿತು. ಅವರ ವ್ಯಕ್ತಿತ್ವ ಒಂದು Prism ತರಹ. ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ರೀತಿಯಾಗಿ ವರ್ತಿಸಿ ಹೆಚ್ಚಿನ ವ್ಯಕ್ತಿತ್ವ ತೋರಿಸಿದರು. as Friend, Guide, Close relative ತರಹ ನಾನು ಉಷಾವನ್ನು ಕಂಡಿದ್ದೇನೆ. ಅವರ ಅಗಲಿಕೆಯ ಸಂದರ್ಭದಲ್ಲಿ ನನ್ನ ಮನದಲ್ಲಿ ಎದ್ದ ಭಾವನೆಗಳು ಕವಿತೆಯಾಗಿ ಮೂಡಿದ್ದನ್ನು ಈ ಕೆಳಗೆ ಬರೆದಿದ್ದೇನೆ.

ಮಮತೆಯ ಮಗಳಾಗಿ ಬೆಳೆದೆ
ನೆಚ್ಚಿನ ನಲ್ಲೆಯಾಗಿ ನಡೆದೆ
ವಾತ್ಸಲ್ಯಮಯಿ ತಾಯಿಯಾಗಿ ತೋರಿದೆ
ಸದಾ ಮಿಂಚಿನ ವೇಗದಲಿ ನಡೆದಾಕೆ
ಇಂದೇಕೆ ನಿಶ್ಚಲಳಾದೆ?
ಅರವತ್ತರ ಹೊಸ್ತಿಲು ದಾಟಿದರೂ
ಹದಿನಾರರ ಹುಮ್ಮಸ್ಸಿನಿಂದ ನಡೆಯುವಾಕೆ
ಹೊದ್ದ ಸೆರಗನೇ ಮತ್ತೆ ಮತ್ತೆ ಹೊದೆಯುತ್ತ
ಬಿಂಕದಿಂದ ಬರುವಾಕೆ
ಇಂದೇಕೆ ನಿಶ್ಚಲಳಾದೆ?
ಸಭೆ ಇರಲಿ, ಸಮ್ಮೇಳನವೇ ಇರಲಿ
ಎಲ್ಲೆಲ್ಲೂ ಅಸ್ತಿತ್ವ ಬೀರುತ್ತ
ತಾನೇ ಮಾಡಬೇಕೆಂಬ ಹಂಬಲ ಹೊತ್ತ
ನಾ ತಿಳಿದ, ನನ್ನ ಸಹಗಾರ್ತಿ
ಅದೇಕೆ ಇಷ್ಟೊಂದು ಅವಸರದಲ್ಲಿ ತಿರುಗಿ ಬಾರದ ದಾರಿ ಹಿಡಿದೆ?
ಎಲೆ ಮರೆಯ ಹೂವಿನಂದದಿ ಜೀವನ ನಡೆಸಿ ಅಕಾಲದಲ್ಲಿ ಮರೆಯಾದ ನಿನ್ನನ್ನು ಯಾವ ಹೂವೆಂದು ಕರೆಯಲಿ?
ನೀನು.....

- ಗುಲಾಬಿಯೇ, ಅದೆಷ್ಟು ಸುಹಾಸನೇ ನೀಡಿರುವೆ?
- ಬಕುಳೆಯ ಹೂವೇ? - ಬಾಡಿದರೂ ಎಲ್ಲೆಲ್ಲೂ ನಿನ್ನ ಮಧುರ ವಾಸನೆಯೆಷ್ಟು?

(ಪುಟ 16ಕ್ಕೆ)

Regn. No. 040015/86
Regn. No. MH/by/NE121/95

# ಸ್ನೇಹಮಯ ಉಷಾ ಜೈರಾಂ ಇನ್ನಿಲ್ಲ!

(ಪುಟ 6ರಿಂದ)

ಮತ್ತೂ ಉತ್ತಮವಾಗಿ ಕೆಲಸ ಮಾಡಿಸುವ ಕಲೆ ಅವರಿಗೆ ಕರಗತವಾಗಿತ್ತು. ಅಂದು ನಾಟಕ ತಂಡಕ್ಕೆ ತಿಂಡಿ ಹಂಚುವಾಗ ಪಾದರಸದಂತೆ ಕೆಲಸ ಮಾಡುತ್ತಾ ಎಲ್ಲರನ್ನು ಸ್ನೇಹದಿಂದ ಮಾತನಾಡಿಸುವುದು ಕಂಡು ನಾನು ಆಶ್ಚರ್ಯ ಪಟ್ಟೆ! ಅಂದೇ ಅವರ ಮಗಳು ಸರಿತಾರವರ ಪರಿಚಯವೂ ಆಯ್ತು.

---

**ಯಾರೇ ಆಗಲಿ ಕಡ್ಡಿಯಷ್ಟು ಕೆಲಸ ಮಾಡಿದ್ದರೂ ಅದನ್ನು ದೊಡ್ಡ ದೆಂದೆಣಿಸಿ ಅವರ ಬೆನ್ನು ತಟ್ಟಿ, ಅವರಿಂದ ಮತ್ತೂ ಉತ್ತಮವಾಗಿ ಕೆಲಸ ಮಾಡಿಸುವ ಕಲೆ ಅವರಿಗೆ ಕರಗತವಾಗಿತ್ತು.**

---

ನಾನು `ನೇಸರು'ನಲ್ಲಿ ಏನೇ ಬರೆದರೂ ಮುಂದೆ ಅವರು ಭೇಟಿಯಾದಾಗ "ಏನೇನೋ ಬರೆಯುತ್ತಿರುತ್ತೀರಿ ಓದುತ್ತಿರುತ್ತೇನೆ" ಎಂತ ಹೇಳೇ ಹೇಳುತ್ತಿದ್ದರು. ಅವರ ಸ್ನೇಹಮಯ ವ್ಯಕ್ತಿತ್ವ ಎಂತಹದೆಂದರೆ ಒಮ್ಮೆ ಆ ಗುರುತ್ವಾಕರ್ಷಣಾಶಕ್ತಿಗೆ ಒಳಗಾದಲ್ಲಿ ಅದನ್ನು ಮರೆಯುವಂತಿಲ್ಲ ! ಇಂತಹ ಆಕರ್ಷಕ ವ್ಯಕ್ತಿತ್ವದ ಆಕರ್ಷಣೆಗೊಳಗಾದ ಅನೇಕರಲ್ಲಿ ನಾನೂ ಒಬ್ಬಳಾದೆ. ಮೃದು ಮಾತು, ಎಲ್ಲರೊಡನೆ ಚಿಕ್ಕವರು, ದೊಡ್ಡವರೆನ್ನದ ಬೆರೆಯುವ ಸ್ವಭಾವ, ಸದಾ ಎಲ್ಲಾ ಕೆಲಸಕ್ಕೂ ಸಿದ್ಧ. ಅಸೋಸಿಯೇಷನ್ನಿನಲ್ಲಿ ಯಾವುದೇ ಸಮಾರಂಭವಿದ್ದರೂ, ಊಟ, ತಿಂಡಿ ಹಂಚಲು ನಿಲ್ಲುತ್ತಿದ್ದರು. ನಮ್ಮ ಅಸೋಸಿ ಯೇಷನ್ನಿನಲ್ಲಿ ಅವರನ್ನು 'ಅನ್ನ ಪೂರ್ಣೇಶ್ವರಿ' ಎನ್ನುತ್ತಿದ್ದದ್ದು ನಿಜಕ್ಕೂ ಸಾರ್ಥಕವೆಂದೆನಿಸುತ್ತಿತ್ತು.

ಅವರ ನಿಧನದ ಶೋಕ ಸಭೆಯಲ್ಲಿ ಭಾಗವಹಿಸಿದಾಗಲೇ ಅವರ ಕರ್ತೃತ್ವದ ವಿರಾಟ್ ದರ್ಶನ ನನಗಾದದ್ದು. ಬೊಂಬಾಯಿಯಲ್ಲಿ ಮೂರು ದಶಕಗಳಿಗಿಂತಲೂ ಮಿಕ್ಕ ಅನೇಕಾನೇಕ ಸಂಸ್ಥೆಗಳನ್ನು ಕಟ್ಟಿ ಆ ಸಂಘ ಸಂಸ್ಥೆಗಳ ಬೆಳವಣಿಗೆಗೆ, ಅಭಿವೃದ್ಧಿಗೆ ಶ್ರಮಿಸಿದ್ದಾರೆ. ರಾಷ್ಟ್ರೀಯ ಮಟ್ಟದ ಸಂಸ್ಥೆಗಳೂ ಸಹ ಅವರ ಸೇವೆಯಿಂದ ವಂಚಿತವಾಗಿಲ್ಲ. ಕಾಯಾ, ವಾಚಾ ಮನಸಾ. ತಮ್ಮನ್ನು ಸಮಾಜ ಸೇವೆಗೆ ಸಮರ್ಪಿಸಿಕೊಂಡಿದ್ದ ಉಷಾರವರು ಸಮಾಜ ಸೇವಕಿ ಎಂದರೆ ಹೀಗಿರಬೇಕು ಎಂಬ ಉದಾಹರಣೆಯನ್ನು ಬಿಟ್ಟು ಹೋಗಿದ್ದಾರೆ.

ಸಮಾಜ ಸೇವೆಯನ್ನು ತಮ್ಮ ಸ್ವಾರ್ಥ ಸಾಧನೆಗಾಗಿಯೇ ಉಪಯೋಗಿಸುವವರೆ ಜಾಸ್ತಿ ಇರುವ ಈ ಕಾಲದಲ್ಲಿ ನಿಸ್ವಾರ್ಥದಿಂದ ದುಡಿದ ಇವರು ಸಮಾಜಕ್ಕೆ ಮಾದರಿಯಾಗಿರುವರು. ಇವರ ಸಂಪರ್ಕ ಹೊಂದಿದ ಯಾವ ಸಂಸ್ಥೆಯೇ ಆಗಲಿ, ವ್ಯಕ್ತಿಯೇ ಆಗಲಿ ಅವರ ಅಗಲಿಕೆಯನ್ನು ವೈಯಕ್ತಿಕ ನಷ್ಟವೆಂದು ಭಾವಿಸುವಂತಾಗಿದೆ.

ಕವಯಿತ್ರಿ, ಗಾಯಕಿ, ರಂಗಮಂಚದ ಹವ್ಯಾಸಿ ಕಲಾವಿದೆ ಸಮಾಜಸೇವಕಿ ಅಬ್ಬಾ ! ಒಂದು ವ್ಯಕ್ತಿಯಲ್ಲಿ ಎಷ್ಟೊಂದು ಒಳ್ಳೆಯ ಗುಣ !? ಎಂದು ಅರಿವಾದರೂ ಆಶ್ಚರ್ಯವಾದೀತು. ಇತ್ತೀಚೆಗೆ ಬೊಂಬಾಯಿ ಕಂಡ 1992, 93ರ ಭೀಕರ ಅಗ್ನಿ ಕಾಂಡಗಳು, ಜಾತೀಯ ಹಿಂಸೆ ದೊಂಬಿಗಳಲ್ಲೂ ಹಿಂಜರಿಯದೆ ಧಾರಾವಿಯಂತಹ ಝುಗ್ಗಿ ಝೋಪಡಿಯ ಜನಗಳ ಸೇವೆಗೆ ನುಗ್ಗುತ್ತಿದ್ದರಿವರು. ಇತ್ತೀಚೆಗೆ ತಮ್ಮ ಕಾರ್ಯಕ್ಷೇತ್ರವನ್ನು ಮತ್ತೂ ವಿಸ್ತರಿಸಿ ಬೊಂಬಾಯಿನ ಅಲೆಮಾರಿ ಮಕ್ಕಳು (Street Children)ಗಳ ಸೇವೆಗೂ ನಿಂತಿದ್ದರು. ಇವರಿಗೆ 24 ಘಂಟೆ ಸಾಲುತಿತ್ತೇ? ಎಂಬುದೊಂದು ಆಶ್ಚರ್ಯದ ಸಂಗತಿ. ಅಂದಿನ ಶೋಕ ಸಭೆಯಲ್ಲಿ ಮಾತನಾಡುತ್ತಾ ಶ್ರೀಮತಿ ಸುನೀತಿ ಉದ್ಯಾವರ ಹೇಳಿದರು. ಉಷಾ ಜಯರಾಂರವರ ಶ್ರಮದಿಂದಲೇ ಬೊಂಬಾಯಿಯಲ್ಲಿ ಮಹಿಳಾ ಲೇಖಕಿಯರ ಸಮ್ಮೇಳನ ಏರ್ಪಟ್ಟಿತ್ತು ಎಂದು.

ಇಷ್ಟೆಲ್ಲಾ ಗುಣವಿಶೇಷಗಳಿದ್ದರೂ ಹೊಗಳಿಕೆ, ಪ್ರಚಾರದಿಂದ ದೂರವಿರುತ್ತಿದ್ದರು. ಎಲೆ ಮರೆಯ ಕಾಯಂತೆ ಸದಾ ಸೇವಾ ನಿರತರಾಗಿರುತ್ತಿದ್ದವರು. ಹೊಗಳಿಕೆ, ಪುರಸ್ಕಾರ ಬಯಸದ ವ್ಯಕ್ತಿ ಯಾರಿಗೆ ತಾನೇ ಪ್ರಿಯರಾಗಲಾರರು?

ಅಂದಿನ ಶೋಕ ಸಭೆಯಲ್ಲಿ ಮಾತನಾಡುತ್ತಾ ವಡಾಲಾ, ಸಯಾನ್, ಮಾತುಂಗ ಮಹಿಳಾ ಮಂಡಳಿಯ ಅಧ್ಯಕ್ಷೆ, ವಯೋವೃದ್ಧೆ ಶ್ರೀಮತಿ ಕಸ್ತೂರಿತಾಯಿ ಮಾಂಜರೇಕರ್ ನುಡಿದಂತೆ "ಎಲ್ಲರಿಗೂ ಪ್ರಿಯವಾದ ವ್ಯಕ್ತಿ ದೇವರಿಗೂ ಪ್ರೀಯರಾದರು" ಇಷ್ಟು ಬೇಗ. ಅವರು ನಮ್ಮನ್ನಗಲಿದ್ದು ನಮ್ಮ ದುರ್ದೈವವೇ ಸರಿ. ಎಲ್ಲರಿಗೂ ಪ್ರಿಯರಾದ ಉಷಾ ಆಂಟಿ ಇನ್ನಿಲ್ಲ !

## ನನ್ನ ಸಹಗಾರ್ತಿ ಉಷಾ

(ಪುಟ-15ರಿಂದ)

- ಹಸಿರು ಸಂಪಿಗೆಯೇ? ಎಲೆಯ ಹಿಂದಿನಿಂದಲೂ
  ಎಲ್ಲರ ಮನ ಮೋಹಿಸುವ ಮೋಡಿಯನ್ನು
  ಪಡೆದಾಕೆ
- ಕೇದಿಗೆಯ ಹೂವೆ? ದರ್ಪದಾ ಧರ್ಮ
  ಅದಕ್ಕಾಗಿ ಸರ್ಪದ ಛಲವನ್ನು ಪಡೆದಿದ್ದೆಯಾ?
- ದುಂಡು ಮಲ್ಲಿಗೆಯೇ? ನಿನ್ನಯ ಆಕರ್ಷಣೆ,
  ಸರ್ವರ ಮನಸೆಳೆದು ನಿನ್ನ ಆಧೀನರನ್ನಾಗಿ
  ಮಾಡಿದ್ದೆರಯಾ?

ಆದರೆ
ಇಂದೆಲ್ಲಿ ನೀನು.....

— ಮೀರಾ ಕುಲಕರ್ಣಿ

## SHRADDHA

*(Contd. pg. 13)*

showered on them by Usha, Sarita, Pravin and Archana that won them over to come to school and listen to what Sir (Pravin), Didi (Archana) and Badididi (Usha) had to say and teach. The first few children liked what they got at school and brought in more children to join. Today, there are some fifty children enjoying the fruits of the effort put in by Usha and other committed members. The children have learnt to keep themselves and also their surroundings acan. They take bath, comb their hair and wash their clothes without being told to. As they share the meals, they also share responsibility to clean the utensils. They spend their time in organised games, also learning to read and write. Among these, now 10 children are admitted to regular school and another 8 go to training centre to learn skills which they can put to use for earning a living.

Thus Usha's dream of putting these children on a right path for self development with all the love and care has become a reality. But she has passed into a realm beyond the dreams. The rest of the team in this project has to see that it continues to grow and support more and more children in need in years to come.

Edited, Printed & Puolished by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38